49

# ತಪ್ಪು ಪ್ರಬೋಧನೆಗಳು

## (20:1-34)

ಈ ಅಧ್ಯಾಯವು ಯುದಾಯ ಮತ್ತು ಸಮಾರ್ಯದಲ್ಲಿ ಯೇಸು ಮಾಡಿರುವ ಸೇವೆಯ ಕುರಿತು ತಿಳಿಸುವದನ್ನು ಮುಂದುವರಿಸುತ್ತದೆ, ಇದು 19ನೇ ಅಧ್ಯಾಯದಲ್ಲಿ ಪ್ರಾರಂಭಗೊಂಡಿದೆ. ಅದರಲ್ಲಿ ದ್ರಾಕ್ಷೇ ತೋಟದಲ್ಲಿ ಆಳುಗಳು ಕೆಲಸ ಮಾಡುವ ಸಾಮ್ಯ (20:1-16), ಯೇಸುವಿನ ಮರಣದ ಕುರಿತು ಮೂರನೆಯ ಸಾರಿ ಹೇಳಿದ್ದು (20:17-19), ದೇವರ ರಾಜ್ಯದಲ್ಲಿ ಶ್ರೇಷ್ಟತೆ ಕುರಿತು ಅಪ್ಪಣೆ (20:20-28), ಮತ್ತು ಯೆರಿಕೋ ಪಟ್ಟಣದಲ್ಲಿ ಇಬ್ಬರು ಕುರುಡರಿಗೆ ಕಣ್ಣುಕೊಟ್ಟದ್ದು ಈ ಸಾಮ್ಯಗಳು ಒಳಗೊಂಡಿವೆ (20:29-34).

### ದ್ರಾಕ್ಷೇ ತೋಟದಲ್ಲಿ ಆಳುಗಳ ಸಾಮ್ಯ (20:1-16)

**1ಅದು ಹೇಗಂದರೆ - ಪರಲೋಕರಾಜ್ಯವು ಒಬ್ಬ ಮನೆಯ ಯಜಮಾನನಿಗೆ ಹೋಲಿಕೆ
ಯಾಗಿದೆ. ಅವನು ತನ್ನ ದ್ರಾಕ್ಷೇತೋಟಕ್ಕೆ ಕೂಲೀ ಆಳುಗಳನ್ನು ಕರೆಯುವದಕ್ಕೆ ಬೆಳಿಗ್ಗೆ
ಹೊರಟನು. 2ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ ಗೊತ್ತುಮಾಡಿ ಅವರನ್ನು ದ್ರಾಕ್ಷೇ
ತೋಟಕ್ಕೆ ಕಳುಹಿಸಿದನು. 3ತರುವಾಯ ಹೆಚ್ಚುಕಡಿಮೆ ಒಂಭತ್ತು ಘಂಟೆಗೆ ಹೋಗಿ ಪೇಟೆಯಲ್ಲಿ
ಸುಮ್ಮನೆ ನಿಂತಿದ್ದ ಇನ್ನು ಕೆಲವರನ್ನು ಕಂಡು - 4ನೀವು ಸಹ ನನ್ನ ದ್ರಾಕ್ಷೇತೋಟಕ್ಕೆ ಹೋಗಿರಿ;
ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ ಅನ್ನಲು ಅವರು ತೋಟಕ್ಕೆ ಹೋದರು.
5ಅವನು ತಿರಿಗಿ ಹೆಚ್ಚುಕಡಿಮೆ ಹನ್ನೆರಡು ಘಂಟೆಗೆ ಮತ್ತು ಮೂರು ಘಂಟೆಗೆ ಹೋಗಿ ಅದೇ
ಪ್ರಕಾರ ಮಾಡಿದನು. 6ತಿರುಗಿ ಹೆಚ್ಚು ಕಡಿಮೆ ಸಾಯಂಕಾಲ ಐದು ಘಂಟೆಗೆ ಹೋಗಿ ಬೇರೆ
ಕೆಲವರು ನಿಂತಿರುವದನ್ನು ಕಂಡು ಅವರನ್ನು - ದಿನವೆಲ್ಲಾ ಇಲ್ಲಿ ಯಾಕೆ 7ಸುಮ್ಮನೆ ನಿಂತಿದ್ದೀರಿ
ಎಂದು ಕೇಳಲು ಅವರು - ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ ಅಂದಾಗ ಅವನು -
ನೀವು ಸಹ ನನ್ನ ದ್ರಾಕ್ಷೇತೋಟಕ್ಕೆ ಹೋಗಿರಿ ಅಂದನು. 8ಸಂಜೇಹೊತ್ತಿಗೆ ದ್ರಾಕ್ಷೇತೋಟದ
ಯಜಮಾನನು ತನ್ನ ಪಾರುಪತ್ಯಗಾರನಿಗೆ - ಆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು
ಮೊದಲು ಮಾಡಿಕೊಂಡು ಮೊದಲು ಬಂದವರ ತನಕ ಅವರಿಗೆ ಕೂಲಿಕೊಡು ಎಂದು ಹೇಳಿ
ದನು. 9ಆಗ ಸಾಯಂಕಾಲ ಐದು ಘಂಟೆಗೆ ಬಂದವರಿಗೆ ಒಂದೊಂದು ಪಾವಲಿ ಸಿಕ್ಕಿತು.
10ತರುವಾಯ ಮೊದಲಿನವರು ಬಂದು ತಮಗೆ ಹೆಚ್ಚು ದೊರೆಯುವದೆಂದು ನೆನಸಿದರು;
ಆದರೆ ಇವರಿಗೆ ಸಹ ಒಂದೊಂದು ಪಾವಲಿಯೇ ಸಿಕ್ಕಿತು. 11ಅದನ್ನು ತೆಗೆದುಕೊಂಡು ಮನೆಯ
ಯಜಮಾನನ ಮೇಲೆ ಗುಣುಗುಟ್ಟಿ - 12ಕಡೆಗೆ ಬಂದ ಇವರು ಒಂದು ತಾಸು ಹೊತ್ತು ಮಾತ್ರ
ಕೆಲಸ ಮಾಡಿದ್ದಾರೆ; ನಾವು ದಿನವೆಲ್ಲಾ ಬಿಸಲಿನಲ್ಲಿ ಕೆಲಸ ಮಾಡಿ ಕಷ್ಟಪಟ್ಟಿದ್ದೇವೆ; ಇವರನ್ನು
ನಮಗೆ ಸಮಮಾಡಿದ್ದೀಯೆ ಅಂದರು. 13ಅದಕ್ಕೆ ಅವನು ಅವರಲ್ಲಿ ಒಬ್ಬನಿಗೆ - ಏನಪ್ಪಾ, ನಾನು
ನಿನಗೆ ಅನ್ಯಾಯಮಾಡಲಿಲ್ಲ; ನೀನು ನನ್ನ ಸಂಗಡ ಒಂದು ಪಾವಲಿಗೆ ಒಡಂಬಟ್ಟಿಯಲ್ಲಾ;
14ನಿನ್ನ ಕೂಲಿ ತಕ್ಕೊಂಡು ಹೋಗು; ನಿನಗೆ ಕೊಟ್ಟಂತೆ ಕಡೆಗೆ ಬಂದ ಇವನಿಗೂ ಕೊಡುವದಕ್ಕೆ
ನನಗೆ ಮನಸ್ಸುಂಟು. 15ನನ್ನ ಬದುಕನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೋ?
ನಾನು ಒಳ್ಳೆಯವನಾಗಿರುವದು ನಿನ್ನ ಕಣ್ಣನ್ನು ಒತ್ತುತ್ತದೋ ಎಂದು ಹೇಳಿದನು. 16ಈ ಪ್ರಕಾರ**

**ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು ಎಂದು ಹೇಳಿದನು.**

ಈ ಸಾಮ್ಯವನ್ನು ಹೇಳಲು ಯೇಸು ಸಿದ್ಧನಾಗಿರುವಂತೆ, ಪೇತ್ರನು ಕರ್ತನಿಗೆ ಅಪೊಸ್ತಲರು ತಮ್ಮ ತ್ಯಾಗಕ್ಕಾಗಿ ಅವರು ಮಾಡುವ ಸೇವೆಗಾಗಿ ಯಾವ ಪ್ರತಿಫಲ ಸಿಗುತ್ತದೆ ಕೇಳಿದನು (19:27). ಯೇಸು ಪೇತ್ರನಿಗೆ ಅವರೆಲ್ಲರಿಗೆ ನಿರ್ದಿಷ್ಟವಾದ ಬಹುಮಾನ ಅವರಿಗೆ ಇದೆ; ಅವರು ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವರು (19:28). ಆತನು ಮುಂದೆ ಅವರಿಗೆ ತನ್ನ ಹೆಸರಿನ ನಿಮಿತ್ತ ಮತ್ತು ಸುವಾರ್ತೆ ನಿಮಿತ್ತ ತ್ಯಾಗವನ್ನು ಮಾಡಿದ್ದರೆ ಅವರಿಗೆ ಮಹತ್ತರವಾದ ಬಹುಮಾನಗಳು ಸಿಗುತ್ತವೆ ಎಂದು ಹೇಳಿದನು (19:29). ಅಂತಿಮವಾಗಿ, ಆತನು, "ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು" ಎಂದು ಹೇಳಿದನು (19:30).

ಯೇಸು ಮುಂದೆ ದ್ರಾಕ್ಷೇತೋಟದಲ್ಲಿ ಆಳುಗಳು ಕೆಲಸಮಾಡುವ ಸಾಮ್ಯವನ್ನು ಬೇರೆ ಬೇರೆ ಬೆಳಕಿನಡಿಯಲ್ಲಿ ಅದರ ಸತ್ಯವನ್ನು ವಿವರಿಸಿದನು (20:1-16). ಆತನ ಉದ್ದೇಶ ತನ್ನ ಶಿಷ್ಯರು ಸೇವೆಗಾಗಿ ತಪ್ಪಾದ ಪ್ರಚೋದನೆ ಹೊಂದುವದರ ವಿರುದ್ಧವಾಗಿ ಎಚ್ಚರಿಕೆಯನ್ನು ಕೊಟ್ಟನು. ಒಬ್ಬನು ಪ್ರತಿಫಲವನ್ನು ಆಪೇಕ್ಷಿಸಿದರ ಕರ್ತನಿಗೆ ಸೇವೆ ಮಾಡಲು ಆಗುವದಿಲ್ಲ. ರಕ್ಷಣೆ ಎನ್ನುವದು ಒಂದು ಕೃಪೆಯಾಗಿದೆ; ಅದನ್ನು ಉತ್ತಮ ಕಾರ್ಯಗಳಿಂದ ಅರ್ಹತೆ ಹೊಂದಲು ಆಗುವದಿಲ್ಲ (ಎಫೆಸ 2:8-10). ಒಬ್ಬನು ಇನ್ನೊಬ್ಬ ಕೆಲಸಗಾರನೊಂದಿಗೆ ಹೋಲಿಸಿಕೊಳ್ಳುವುದಾಗಲಿ ಅಥವಾ ಅವರಿಗೆ ದೇವರಿಂದ ಬರುವ ಆಶೀರ್ವಾದಗಳಿಗಾಗಿ ಹೊಟ್ಟೆಕಿಚ್ಚು ಪಡುವದಾಗಲಿ ಮಾಡಬಾರದು.

**ವಚನ 1. ಪರಲೋಕರಾಜ್ಯವು** ಎನ್ನುವ ಭಾಗವು, ಅಥವಾ ಸಮವಾಗಿರುವ ಶಬ್ದವು, ಯೇಸು ಸಾಮ್ಯವನ್ನು ಬೇರೆ ವಸ್ತುಗಳಿಗೆ ಹೋಲಿಸಿ ದೇವರ ರಾಜ್ಯವನ್ನು ಪರಿಚಯಿಸುವದನ್ನು ಆತನು ಕೆಲವು ಸಾರಿ ಮಾಡಿದನು (13:24, 31, 33, 44, 45, 47; 18:23; 22:2; 25:1). ಈ ಮೂಲಪಠ್ಯದಲ್ಲಿ ಪರಲೋಕ ರಾಜ್ಯವನ್ನು ದ್ರಾಕ್ಷೇ ತೋಟದ ಯಜಮಾನನಿಗೆ ಹೋಲಿಸಿರುವದಿಲ್ಲ, ಆದರೆ ಯಜಮಾನನು ತನಗೆ ಅವಶ್ಯವಿರುವ ಕೂಲಿ ಆಳುಗಳನ್ನು ಬಾಡಿಗೆಗೆ ತೆಗೆದುಕೊಂಡಿರುವ ಸನ್ನಿವೇಶಕ್ಕೆ ಹೋಲಿಸಿದ್ದಾನೆ. ಅಲ್ಲಿ ತೋಟದ ಯಜಮಾನನ ಕೃಪೆ ಮತ್ತು ಒಳ್ಳೆಯ ಮನಸ್ಸಿನಿಂದ ಕಾರ್ಯ ಮಾಡಿರುವದನ್ನು ಆ ಅಧ್ಯಾಯದ ಸಮಗ್ರ ಭಾಗವಾಗಿ ಅಲ್ಲಿ ಕಲಿಸಲಾಗಿದೆ ಎಂದು ಹೇಳಬಹದು.

"ಪರಲೋಕ ರಾಜ್ಯ," "ದೇವರ ರಾಜ್ಯ," "ನನ್ನ ರಾಜ್ಯ" ಮತ್ತು "ರಾಜ್ಯ" ಎನ್ನುವವುಗಳೆಲ್ಲವು ಒಂದೇಯಾಗಿರುವಂಥವುಗಳಾಗಿವೆ. ಮೂಲ ಪಠ್ಯವು ಪ್ರತಿಯೊಂದು ಈ ಭಾಗಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಕೆಲವೊಂದು ಬರುತ್ತವೆ, ನಿತ್ಯತ್ವವು ಅಲ್ಲಿ ಅಸ್ತಿತ್ವಹೊಂದಿದೆ ಎಂದು ಈ ಶಬ್ದಗಳು ಹೇಳುವದಿಲ್ಲ, ಆದರೆ ಇರುವಿಕೆ ಈಗಲೂ ಇರುತ್ತದೆ. ಸ್ನಾನಿಕನಾದ ಯೋಹಾನನು ಬಂದು, "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" ಎಂದು ಸಾರಿದನು (3:2). ಯೇಸು, "ಕಾಲ ಪರಿಪೂರ್ಣವಾಯಿತು, ದೇವರ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ" ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು (ಮಾರ್ಕ 1:15). ಅವರು ಒಂದೇ ರಾಜ್ಯದ ಕುರಿತು ಸಾರಿದರು, ಮತ್ತು ಅದು ಬೇಗನೆ ಬರುವದೆಂದು ಹೇಳಿದರು. ಅಪೊಸ್ತಲರು ದೇವರ ರಾಜ್ಯವು ಬಲದೊಂದಿಗೆ ಬರುವದನ್ನು ನೋಡುವರು ಎಂದು ಯೇಸು ವಾಗ್ದಾನ ಮಾಡಿದನು (ಮಾರ್ಕ 9:1). ಪರಲೋಕ ಆರೋಹಣಕ್ಕಿಂತ ಮುಂಚೆ ಇದೆ ಹನ್ನೊಂದು ಜನರಿಗೆ ಇದೆ ಸಂಗತಿಯನ್ನು ಹೇಳಿದನು - ಯೂದನು ಅವರೊಂದಿಗೆ ಬಹಳ

ಕಾಲವಿರಲಿಲ್ಲ - "ತಂದೆಯು ನಿಮಗೆ ವಾಗ್ದಾನ ಮಾಡಿದ್ದಾನೆ" ಅದಕ್ಕಾಗಿ ಕಾದುಕೊಂಡಿರಿ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 1:4). ಇದು ಪವಿತ್ರಾತ್ಮನ ದೀಕ್ಷಾಸ್ನಾನ ಅವರ ಮೇಲೆ ಬಂದು ಅದರಿಂದ ತುಂಬಿಸಲ್ಪಟ್ಟವರಾಗಿ ಕ್ರಿಸ್ತನಿಗಾಗಿ ಸಾಕ್ಷೀ ಹೇಳುವವರಾದರು "ಯೂದಾಯ ಮತ್ತು ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟ ಕಡೆಯವರೆಗೂ ಆತನಿಗೆ ಸಾಕ್ಷಿಗಳಾಗಿದ್ದರು" (ಅಪೊಸ್ತಲರ ಕೃತ್ಯಗಳು 1:8). ಈ ವಾಗ್ದಾನವು ಪಂಚಶತ್ತಮ ದಿನದಂದು ನೆರವೇರಿತು (ಅಪೊಸ್ತಲರ ಕೃತ್ಯಗಳು 2). ಆ ದಿನದಂದು ಪವಿತ್ರಾತ್ಮನು ಬಂದನು, ಅಪೊಸ್ತಲರು ಅದ್ಭುತವಾದ ಬಲವನ್ನು ಸ್ವೀಕರಿಸಿದರು, ದೇವರ ರಾಜ್ಯವು/ಪರಲೋಕ ರಾಜ್ಯವು ಬಂತು (ಅಪೊಸ್ತಲರ ಕೃತ್ಯಗಳು 2:29-41; 1 ಕೊರಿಂಥ 15:20-28; ಕೊಲಸ್ಸೆ 1:13; ಇಬ್ರಿಯ 12:28).

**ತೋಟದ ಯಜಮಾನ** (*oikodespotēs*) ಎನ್ನುವ ಶಬ್ದವು ಸ್ಪಷ್ಟವಾಗಿ "ಮನೆಯ ಯಜಮಾನ" ಎನ್ನುವ ಅರ್ಥವು ಒಳಗೊಂಡ ಅನುವಾದ ಮಾಡಿರುವ ಶಬ್ದವಾಗಿದೆ. ಕೆಲವು ಸಾರಿ ಇದನ್ನು ಸಾಮ್ಯಗಳಲ್ಲಿ ಯೇಸು ಅಥವಾ ದೇವರು ಎಂದು ಸೂಚಿಸಲಾಗಿದೆ (10:25; 13:27; 20:1; 21:33; ಲೂಕ 13:25; 14:21). ಈ ಶಬ್ದವು ವ್ಯಕ್ತಿಯ ಐಶ್ವರ್ಯ ಮತ್ತು ಅಧಿಕಾರವನ್ನು ತೋರಿಸುತ್ತದೆ. ಈ ಸಾಮ್ಯದಲ್ಲಿ "ತೋಟದ ಯಜಮಾನ" ಮೇಲ್ವಿ ಚಾರಕನಾಗಿ ಕೆಲಸಗಾರರನ್ನು ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದಾನೆ (20:8), ಆದರೆ ಆತನು ವೈಯಕ್ತಿಕವಾಗಿ ಬಾಡಿಗೆಗೆ ತೆಗೆದುಕೊಳ್ಳುವದರಲ್ಲಿ ನಿರತನಾಗಿದ್ದಾನೆ.

**ದ್ರಾಕ್ಷೇತೋಟವು** ಪಾಲೇಸ್ತಾನ ದೇಶದಲ್ಲಿ ಸಾಮಾನ್ಯ ನೋಟವಾಗಿದೆ; ಇವುಗಳು ಬೆಟ್ಟಗಳ ಗುಡ್ಡಗಳ ಪಕ್ಕದಲ್ಲಿ ಮಾಡಲಾಗಿದೆ. ಹಳೆ ಒಡಂಬಡಿಕೆಯಲ್ಲಿ, ವಾಗ್ದಾನ ದೇಶದಲ್ಲಿ ಯಶಸ್ವಿಯಾದ ಅಂಜೂರದ ಮರಗಳು ಮತ್ತು ಎಣ್ಣೆ ಮರಗಳು ಮತ್ತು ದ್ರಾಕ್ಷೇತೋಟಕ್ಕೂ ಸಮಾನತೆಯನ್ನು ಕಾಣುತ್ತೇವೆ (ಧರ್ಮೋಪದೇಶಕಾಂಡ 6:11; ಯೆಹೋಶುವ 24:13; 1 ಅರಸುಗಳು 4:25; 2 ಅರಸುಗಳು 18:31; ಯೋವೇಲನು 1:12; 2:22). ಇನ್ನು ಹೆಚ್ಚಾಗಿ, ಇಸ್ರಾಯೇಲ್ ದೇಶವು ಕೆಲವು ಸಾರಿ ದೇವರ ತೋಟ ಅಥವಾ ದೇವರ ದ್ರಾಕ್ಷೇತೋಟವೆಂದು ನಿರೀಕ್ಷಿಸಲಾಗಿತ್ತು (ಯೆಶಾಯ 5:1-7; ಯೆರೆಮಿಯ 2:21; 12:10; ಹೋಶೆಯ 10:1). ಹೊಸ ಒಡಂಬಡಿಕೆಯಲ್ಲಿ ದ್ರಾಕ್ಷೇತೋಟವು ಯೇಸುವಿನ ಸಾಮ್ಯವಾಗಿದೆ (20:1; 21:28, 33; ಲೂಕ 13:6). ಪ್ರಿಯವಾದ ಭಾಗವಾಗಿ ದ್ರಾಕ್ಷೇತೋಟವನ್ನು ಕ್ರಿಸ್ತನ ಸಭೆಗೆ ಗುರುತಾಗಿಯು ಸಹ ಉಪಯೋಗಿಸಲಾಗಿದೆ (ಯೋಹಾನ 15:1-11; 1 ಕೊರಿಂಥ 9:7).

ಭೂಮಿಯ ಯಜಮಾನನು ತನ್ನ ದ್ರಾಕ್ಷೇತೋಟದಲ್ಲಿ ಕೆಲಸಮಾಡುವದಕ್ಕಾಗಿ **ಆಳುಗಳನ್ನು ಕೂಲಿಗಾಗಿ ಕರೆಯಲು ಬೆಳಗಿನ ಜಾವದಲ್ಲಿ ಹೋದನು,** ಸಂತೆ ಸ್ಥಳದಲ್ಲಿ ಕೂಲಿ ಆಳುಗಳು ಸಿಗುವ ಸ್ಥಳವಾಗಿದೆ (20:3). ಈ ಕೆಲಸಗಾರರು ಸಹಜವಾಗಿ ಅನಕ್ಷರಸ್ತರು, ಯಾವುದೇ ವಿಶೇಷವರವಿಲ್ಲದವರು, ಮತ್ತು ಅವರು ಆರ್ಥಿಕವಾಗಿ ಸಮಾಜಿಕವಾಗಿ ಕೆಳಮಟ್ಟದಲ್ಲಿ ಇರುವಂಥವರು ಆಗಿದ್ದರು. ಅವರು ಕೆಲವು ಸಾರಿ ಸಂಬಳ ಕೊಡುವವರ ಕೈಕೆಳಗೆ ಇರುತ್ತಿದ್ದರು ಅವರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರು (ಮಲಾಕಿ 3:5; ಯಾಕೋಬ 5:4). ದೇವರು ಅಂಥವರ ಒಳತಿಗಾಗಿ ವಿಶೇಷವಾದ ಆಜ್ಞೆಗಳನ್ನು ಕೊಟ್ಟಿದ್ದಾನೆ (ಯಾಜಕಕಾಂಡ 19:13; ಧರ್ಮೋಪದೇಶಕಾಂಡ 24:14, 15).

ಕೆಲಸದ ದಿನವನ್ನು ಪ್ರತಿ ಮೂರು ಗಂಟೆಗಳಂತೆ ನಾಲ್ಕು ಭಾಗಗಳಾಗಿ ವಿಭಾಗಿಸಲಾಗಿತ್ತು. ಇದು ಬೆಳಿಗ್ಗೆ 6.00 ಗಂಟೆ ಅಥವಾ ಸೂರ್ಯನು ಹುಟ್ಟುವಾಗ ಪ್ರಾರಂಭವಾಗುತ್ತದೆ, ಮತ್ತು ಹನ್ನೆರಡು ಗಂಟೆಗಳ ಕಾಲ ಮುಂದುವರಿಯುತ್ತದೆ, ಅದು ಸೂರ್ಯ ಮುಳುಗುವಾಗ ಸಂಜೆ 6.00 ಗಂಟೆಗೆ ಮುಕ್ತಾಯವಾಗುತ್ತದೆ (ಕೀರ್ತನೆ 104:20-23; ಯೋಹಾನ 11:9). ಯೆಹೂದ್ಯ ಧರ್ಮಶಾಸ್ತ್ರ ಹೇಳುವದೇನೆಂದರೆ ಕೆಲಸಗಾರರು ಯಜಮಾನನ ಸಮಯಕ್ಕೆ ಹೋಗಬೇಕು, ಆದರೆ ಹಿಂದಕ್ಕೆ ಬರುವಾಗ ಅವರ ಸ್ವಂತ ಮನಸ್ಸಿನ ಪ್ರಕಾರ ಬರಬಹುದಾಗಿತ್ತು.[1] ಈ

ಸಾಮ್ಯದಲ್ಲಿ ಕೂಲಿ ಆಳುಗಳನ್ನು ಸಂತೆಯಿಂದ ಕರಕೊಂಡು ಬರುವಷ್ಟರಲ್ಲಿ ಕೆಲಸದ ಸಮಯ ಪ್ರಾರಂಭವಾಗಿತ್ತು, ಮತ್ತು ಇದು ಸೂರ್ಯ ಮುಳುಗುವಾಗ ಮುಕ್ತಾಯವಾಯಿತು.[2]

ಪಾಲೇಸ್ತೀನ ಪ್ರದೇಶದಲ್ಲಿ ದ್ರಾಕ್ಷೇಯ ಸುಗ್ಗಿಯು ಸಾಮಾನ್ಯವಾಗಿ ಆಗಸ್ಟ್ ಮತ್ತು ಸೆಪ್ಟೆಂಬರ್‌ಗಳಲ್ಲಿ ಮಾಡಲಾಗುತ್ತದೆ ಆಗ ವಾತವರಣವು ಇನ್ನು ಬಿಸಿಯಾಗಿಯೇ ಇರುತ್ತದೆ (20:12). ಹೊಲದ ಯಜಮಾನನು ಕೂಲಿಯವರನ್ನು ಕರೆತರಲು ಸಂತೆ ಸ್ಥಳಕ್ಕೆ ಒಂದೇ ದಿನದಲ್ಲಿ ಐದು ಸಾರಿ ಹೋಗಿ ಬಂದಿದ್ದಾನೆ (20:1, 3, 5, 6). ಮಳೆ ಬರುವ ಮೊದಲೆ ತನ್ನ ದ್ರಾಕ್ಷೇ ಸುಗ್ಗಿಯನ್ನು ಮಾಡಲು ಆತನು ಅವಸರ ಮಾಡಿರಬಹುದು. ಮೊದಲನೆಯ ಮಳೆಯು ಸೆಪ್ಟೆಂಬರ್‌ನ ಕೊನೆಯಲ್ಲಿ ಆಗುತ್ತದೆ, ಬಹಳ ದಿನಗಳ ಕಾಲ ಬೇಸಿಗೆ ಬರಗಾಲದೊಂದಿಗೆ ಮುಕ್ತಾಯವಾಗುತ್ತದೆ.

**ವಚನ 2.** ಹೊಲದ ಯಜಮಾನನು ಮೊದಲು ಬಂದ **ಕೂಲಿ ಆಳಿನೊಂದಿಗೆ** ಒಂದು ಪಾವಲಿ **ಕೂಲಿ ಗೊತ್ತುಮಾಡಿಕೊಂಡಿದ್ದನು.** ಪಾವಲಿಯು, ಬೆಳ್ಳಿಯ ರೋಮನ್ ನಾಣ್ಯವಾಗಿತ್ತು, ಅದನ್ನು ಸಾಮಾನ್ಯವಾಗಿ ಒಂದು ದಿನದ ಕೂಲಿ ಕೊಡಲು ಉಪಯೋಗಿಸುತ್ತಿದ್ದರು.[3] ರೋಮಾ ಸೈನಿಕರಿಗೂ ಸಹ ಹಣ ಕೊಡಬೇಕಾಗಿತ್ತು.[4] ಅವರು ಒಪ್ಪಂದ ಮಾಡಿಕೊಂಡ ನಂತರ ಆಳುಗಳನ್ನು ತನ್ನ **ದ್ರಾಕ್ಷೇತೋಟದಲ್ಲಿ** ಕೆಲಸ ಮಾಡಲು ಕಳುಹಿಸಿದನು.

**ವಚನ 3.** ಹೊಲದ ಯಜಮಾನನು **ಸಂತೆ ಸ್ಥಳಕ್ಕೆ** ಮತ್ತೆ ತಿರುಗಿ ಸುಮಾರು (9:00). **ಮೂರನೆ ಅವಧಿಗೆ ಬಂದನು.** ಅವನು ಬಂದು, ಇನ್ನೂ ಕೆಲವರು ಕೆಲಸವಿಲ್ಲದೆ ನಿಂತಿರುವವರನ್ನು ನೋಡಿದನು, ಅವರು ಯಾರಾದರೂ ತಮ್ಮನ್ನು ಕೂಲಿಗಾಗಿ ತೆಗೆದುಕೊಂಡು ಹೋಗುತ್ತಾರೆಂದು ಕಾಯುತ್ತಿದ್ದರು. ಹಿಂದಿನ ಕಾಲದಲ್ಲಿ ಜನರು ಒಂದು ದಿನದ ಕೆಲಸಕ್ಕೆ ಜನರನ್ನು ಒಂದೇ ಸಾರಿ ತೆಗೆದುಕೊಳ್ಳುತ್ತಿದ್ದರು, ಪ್ರತಿ ದಿನದ ಅಂತ್ಯದಲ್ಲಿ ತಮ್ಮ ಕೂಲಿಯನ್ನು ತೆಗೆದುಕೊಳ್ಳುತ್ತಿದ್ದರು. ಈ ಸಂಪಾದನೆಯು ಅವರಿಗೆ ಕೇವಲ ಒಂದು ದಿನದ ಅವಶ್ಯಕತೆಗೆ ಸಾಕಾಗುತ್ತಿತ್ತು (6:11). ಅವರಿಗೆ ಕೆಲಸ ಸಿಗದ ದಿನವು ಅವರಿಗೆ ಸಾಕಾಗುವಷ್ಟು ಆಹಾರ ಸಿಗುತ್ತಿರಲಿಲ್ಲ; ಅದರಿಂದ ಈ ಸಾಮ್ಯದಲ್ಲಿ ಕೆಲಸಗಾರರು ಸಂತೆಯಲ್ಲಿ ಇರುವದನ್ನು ನೆನಪಿಗೆ ತರುತ್ತದೆ, ಅವರು ತಮ್ಮನ್ನು ಯಾರಾದರೂ ಕೆಲಸಕ್ಕೆ ತೆಗೆದುಕೊಂಡು ಹೋಗುತ್ತಾರೆಂದು ಕಾಯುತ್ತಿರುತ್ತಾರೆ.[5]

**ವಚನ 4.** ಹೊಲದ ಯಜಮಾನನು ಅವರಿಗೆ ನಿರೀಕ್ಷೆ ಮಾತುಗಳನ್ನು ಹೇಳಿದನು, **ನೀವು ಸಹ ನನ್ನ ದ್ರಾಕ್ಷೇತೋಟಕ್ಕೆ ಹೋಗಿರಿ; ನಿಮಗೆ ಸರಿಯಾದ ಕೂಲಿಯನ್ನು ಕೊಡುತ್ತೇನೆ** ಎಂದು ಅರಿಗೆ ಹೇಳಿ ಕಳುಹಿಸಿದನು. ಗ್ರೀಕ್ ಭಾಷೆಯಲ್ಲಿ, "ನೀವು ಸಹ" ಎನ್ನುವ ಪದ ಒತ್ತಿ ಹೇಳಲಾಗಿದೆ. ಆ ವ್ಯಕ್ತಿಯು ಅವರಿಗೆ ಈಗಾಗಲೆ ಮೂರು ಗಂಟೆಯು ಮುಂಚೆಯಿಂದ ಕೆಲಸಮಾಡುವವರೊಂದಿಗೆ ಸೇರಿಕೊಳ್ಳಿರಿ ಎಂದು ಹೇಳಿದನು. ಅದರ ಬದಲಾಗಿ, "ಸರಿಯಾದದನ್ನೆ ನಾನು ನಿಮಗೆ ಕೊಡುತ್ತೇನೆ" (NASB), ಇನ್ನು ಬೇರೆ ಭಾಷಾಂತರದಲ್ಲಿ "ನಾನು ನಿಮಗೆ ಉತ್ತಮವಾದ ಕೂಲಿ ಕೊಡುತ್ತೇನೆ" (TEV; NEB; REB). ಕೆಲಸಗಾರರು ಅವರಿಗೆ ಕೊಡಲ್ಪಡುವ ಹಣವನ್ನು ಸ್ವೀಕರಿಸಲು ಅವರು ಒಪ್ಪಿಕೊಂಡರು ಮತ್ತು ನಿಶ್ಚಯವಾಗಿ ದ್ರಾಕ್ಷೇತೋಟದ ಯಜಮಾನನ್ನು ನಂಬಿಕೊಂಡು ಅವನ ಪರವಾಗಿಯೇ ಇದ್ದರು. Leon Morris ರವರು ಆಲೋಚಿಸಿದ್ದೇನೆಂದರೆ, ಈ ಕೆಲಸಗಾರರು ತಡವಾಗಿ ಬಂದಿದ್ದರೂ ಸಹ ಅವರು ಪೂರ್ಣ ದಿನದ ಕೂಲಿ ಕೊಡಬೇಕೆಂದು ಕೇಳಲಿಲ್ಲ. ಅವರು ಆತನು ಹೇಗೂ ಅವರಿಗೆ ಸರಿಯಾದ ಪಾವಲಿ ಕೊಡುತ್ತಾನೆಂದು ನಂಬಿದ್ದರು.[6]

**ವಚನ 5.** ಹೊಲದ ಯಜಮಾನನು **ಆರನೆ ಮತ್ತು ಒಂಭತ್ತನೆಯ ಅವಧಿಗೆ ಹೋಗಿ** (12:00 ಮಧ್ಯಾಹ್ನ ಮತ್ತು 3:00 ಸಂಜೆ) ಇನ್ನು ಕೆಲವು ಕೂಲಿ ಆಳುಗಳನ್ನು ಕರೆದು ಕೊಂಡು ಬಂದನು, ಅವರಿಗೂ ಸಹ **ಅದೇ ರೀತಿಯ** ಒಪ್ಪಂದವನ್ನು ಮಾಡಿಕೊಂಡು ಮೂರನೆ ಸಾರಿಗೆ ಕೆಲಸಕ್ಕೆ ಬಂದವರು ಇವರಾಗಿದ್ದರು.

**ವಚನ 6. ಹನ್ನೊಂದನೆಯ ಅವಧಿಗೆ** (5:00 ಸಂಜೆ) - ಕೇವಲ ಕೆಲಸ ಬಿಡುವದು ಇನ್ನೂ ಒಂದು ಗಂಟೆ ಇರುವಾಗ ಆ ಯಜಮಾನನು ಸಂತೆಗೆ ಹಿಂತಿರುಗಿ ಹೋಗಿ ಏನು ಕೆಲಸವಿಲ್ಲದೆ ನಿಂತಿದ್ದವರನ್ನು ಕರೆದು ಕೂಲಿಕೆಲಸಕ್ಕೆ ಕಳುಹಿಸಿದನು. ಆತನು ಅವರಿಗೆ, **ದಿನವೆಲ್ಲಾ ಇಲ್ಲಿ ಯಾಕೆ ಸುಮ್ಮನೆ ನಿಂತಿದ್ದೀರಿ** ಈ ಪ್ರಶ್ನೆಯು ಅವರ ಸೋಮಾರಿ ತನಕ್ಕೆ ಗದರಿಸಿರುವದನ್ನು ಅಥವಾ ಅವರ ಸೋಮಾರಿ ತನಕ್ಕೆ ಹೇಳುವ ಕಾರಣಕ್ಕೆ ಗದರಿಸಿದನೆಂದು ಇಲ್ಲಿ ಅರ್ಥವಾಗುತ್ತದೆ.

**ವಚನ 7.** ಅವರು ಹೇಳಿದ ಪ್ರತಿಕ್ರಿಯೆ **ಯಾರೂ ನಮ್ಮನ್ನು ಕೂಲಿಗೆ** ಕರೆಯಲಿಲ್ಲ ಎಂಬುದಾಗಿತ್ತು. ಈ ಮೂಲ ಪಠ್ಯದಲ್ಲಿ ಅವರ ನಿರುದ್ಯೋಗ್ಯದ ಕುರಿತು ಮುಂದೆ ಯಾವುದು ವಿವರಣೆ ನೀಡಿರುವದಿಲ್ಲ. ಯಜಮಾನನು ಅವರಿಗೆ, ನೀವು ಸಹ **ದ್ರಾಕ್ಷೇತೋಟಕ್ಕೆ ಕೆಲಸಕ್ಕೆ ಹೋಗಿರಿ** ಎಂದು ಹೇಳಿದನು. 4ನೇ ವಚನದಲ್ಲಿದ್ದಂತೆಯೇ, "ನೀವೂ ... ಸಹ" ಎನ್ನುವದರ ಮೇಲೆ ಒತ್ತಿ ಹೇಳಲಾಗಿದೆ. ಆತನು ಕೂಲಿಗಾಗಿ ತೆಗೆದುಕೊಂಡಿರುವ ಜನರನ್ನು ಇಡೀ ದಿನವೆಲ್ಲಾ ಅವರನ್ನು ಸೇರಿಸಿಕೊಳ್ಳಬೇಕಾಗಿತ್ತು. ಈ ಸಂದರ್ಭದಲ್ಲಿ ಯಾವುದೇ ಹಣವನ್ನು ಅಲ್ಲಿ ಸೂಚಿಸಿರುವದಿಲ್ಲ. ಹೆಚ್ಚಾಗಿ ಅವರು ಸಂತೋಷವಾಗಿ ಕೆಲಸವನ್ನು ಸ್ವೀಕರಿಸಿದರು, ಅವರು ಸರಿಯಾದದನ್ನು ಪಡೆದುಕೊಳ್ಳುತ್ತೇವೆಂದು ನಂಬಿಕೆಯಿಟ್ಟಿದ್ದರು. ಬಹುಶಃ ಅವರು ಇತರರು ಸ್ವೀಕರಿಸಿದರಲ್ಲಿ ಸ್ವಲ್ಪ ಭಾಗ ನಮಗೆ ಸಿಗುವದೆಂದು ನಿರೀಕ್ಷೆ ಮಾಡಿರಬಹುದು, ಆದಾಗ್ಯೂ ಅವರಿಗೆ ತಮ್ಮ ಕುಟುಂಬದ ಸಹಾಯಕ್ಕಾಗಿ ಹೆಚ್ಚಿನ ಹಣವೇ ಬೇಕಾಗಿತ್ತು.

**ವಚನ 8.** ಯಾವಾಗ ಕೆಲಸದ ಹನ್ನೆರಡು ಗಂಟೆ ಮುಗಿಯುತ್ತೋ ಆಗ, **ದ್ರಾಕ್ಷೇತೋಟದ ಯಜಮಾನ** ತನ್ನ ಪಾರುಪತ್ಯಗಾರನಿಗೆ ಅಪ್ಪಣೆ ಕೊಟ್ಟು, **ಆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು ಮೊದಲು ಮಾಡಿಕೊಂಡು ಮೊದಲು ಬಂದವರ ತನಕ ಅವರಿಗೆ ಕೂಲಿಕೊಡು** ಎಂದು ಹೇಳಿದನು. ದಿನದ ಕೊನೆಯಲ್ಲಿ ಕೂಲಿ ಹಣ ಕೊಡುವದು ಪದ್ಧತಿಯಾಗಿತ್ತು ಆ ರೀತಿ ಕೊಡುವದರಿಂದ ಅವರು ಉಪವಾಸದಿಂದ ಹೋಗುತ್ತಿರಲಿಲ್ಲ ಎನ್ನುವ ಕಾರಣಕ್ಕಾಗಿ (ಯಾಜಕಕಾಂಡ 19:13; ಧರ್ಮೋಪದೇಶಕಾಂಡ 24:14, 15; ನೋಡಿರಿ ಮತ್ತಾಯ 6:11). ಅಲ್ಲಿ ಮೊದಲು ಬಂದವರು ತಮಗೆ ಮೊದಲು ಸಿಗುವದೆಂದು ನಿರೀಕ್ಷೆ ಮಾಡಿರಬಹುದು. ಈ ಹಿಂಬದಿಯಾಗಿ ಒದಗಿಸುವ ಕ್ರಮವು ಇನ್ನೂಳಿದ ಸಾಮ್ಯಗಳ ಹೇಳಿಕೆಗಳಿಗೆ ಆಧಾರವಾಗಿದೆ. ಈ ಕ್ರಮವು ಗೌರವ ಪರಿಗಣನೆಯ ಸೂತ್ರದಡಿಯಲ್ಲಿ ವಿವರಿಸಲಾಗಿದೆ: "ಈ ಪ್ರಕಾರ ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು" (20:16; ನೋಡಿರಿ 19:30). ಕೇವಲ ಮೊದಲನೆಯ ಮತ್ತು ಕೊನೆಯ ಗುಂಪುಗಳನ್ನು ವಿಶೇಷವಾಗಿ ಸೂಚಿಸಲಾಗಿದೆ, ಐದು ಗುಂಪಿನವರಿಗೂ ಹಣ ಸಂದಾಯ ಮಾಡಿದೆ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

**ವಚನ 9. ಹನ್ನೊಂದನೆಯ ಅವಧಿಗೆ ಬಂದಂತಹ ಪ್ರತಿಯೊಬ್ಬರು** (ಅಂದರೆ ಸಾಯಂಕಾಲ ಐದು ಗಂಟೆಗೆ) ಸಹ ಒಂದೊಂದು ಪಾವಲಿ ಸ್ವೀಕರಿಸಿದರು. ಅವರು ಕೇವಲ ಒಂದು ಗಂಟೆ ಮಾತ್ರ ಕೆಲಸ ಮಾಡಿ ಪೂರ್ಣ ಒಂದು ದಿನದ ಕೂಲಿ ಹಣವನ್ನು ಸ್ವೀಕರಿಸಿದರು. ಈ ಕೆಲಸಗಾರರು ಹೊಲದ ಯಜಮಾನನ ಕರುಣೆಯ ಗುಣಕ್ಕೆ ಕೃತಜ್ಞತೆ ಹೇಳದೆ ಇರಲಿಲ್ಲ ಎನ್ನುವದರಲ್ಲಿ ಯಾವುದೇ ಸಂಶಯವಿಲ್ಲ. ಯಾರು ಮೊದಲು ಕೂಲಿ ಕೆಲಸಕ್ಕೆ ಬಂದರೋ ಅವರು ಕೂಲಿ ಹಣವನ್ನು ಅಂತ್ಯದಲ್ಲಿ ತೆಗೆದುಕೊಂಡಿರುವದಕ್ಕೆ ಸಾಕ್ಷಿಗಳಾಗಿದ್ದರು.

**ವಚನ 10. ಮೊದಲಿಗೆ ಕೆಲಸಕ್ಕೆ ಬಂದವರು** ಪಾರುಪತ್ಯಗಾರನಿಂದ ಬೆಳಿಗ್ಗೆ ತಾವು ಒಪ್ಪಿಕೊಂಡಿರುವ ಪಾವಲಿಗಿಂತಲೂ ಹೆಚ್ಚಿನ ಹಣ ಪಡೆಯಬಹುದೆಂದು ಅವರು ನಿರೀಕ್ಷಿಸಿದರು (20:2). ಅವರ ನಿರಾಶೆಯಲ್ಲಿಯೆ, ಪ್ರತಿಯೊಬ್ಬರು **ಒಂದೊಂದು ಪಾವಲಿ ಸ್ವೀಕರಿಸಿದರು,** ಗ್ರೀಕ್ ಭಾಷೆಯಲ್ಲಿ "ಅವರೂ ಸಹ" ಎನ್ನುವ ಭಾಗವನ್ನು ಒತ್ತಿ ಹೇಳಿದ್ದಾರೆ ಇತರರು ಸ್ವೀಕರಿಸಿದ ಕೂಲಿ ಹಣವನ್ನು ಅವರೂ ಸಹ ಸ್ವೀಕರಿಸಿದರು ಎನ್ನುವಂಥದ್ದಾಗಿದೆ.

**ವಚನ 11.** ಪಾರುಪತ್ಯಗಾರನು ಕೂಲಿಯನ್ನು ಹಂಚುತ್ತಿರುವಾಗ, **ಹೊಲದ ಯಜಮಾನನು** ಹತ್ತಿರದಲ್ಲಿಯೇ ನಿಂತುಕೊಂಡು ಆ ಘಟನೆಯನ್ನು ವೀಕ್ಷಿಸುತ್ತಿದ್ದನು. ಆತನು ತನ್ನ ಒಪ್ಪಂದಕ್ಕೆ ಬದ್ಧನಾಗಿದ್ದರೂ ಸಹ, ಕೆಲಸಗಾರರು ಮೊದಲು ಬಂದವರು ಅವರು ಸ್ವೀಕರಿಸಿದ ಹಣದಿಂದ **ಗೊಣಗುಟ್ಟಿದರು.** ಗ್ರೀಕ್ ಶಬ್ದ ಇಲ್ಲಿ (*gonguzō*) "ಅನುಕರಣನಾಮ," ಎಂದು ಹೇಳಲಾಗುತ್ತದೆ. ಅದರಿಂದ ಅಲ್ಲಿ ಹೇಳಿರುವದನ್ನು ಅನುಕರಿಸಿದಂತೆ ಆಗುತ್ತದೆ. ಆಂಗ್ಲ ಭಾಷೆಯಲ್ಲಿ ನಾವು ಈ ರೀತಿಯಾಗಿ ಹೇಳಬಹುದು, "ಗೊಣಗೊಣ ಅನ್ನು," "ದಂತ ಹೀನನಂತೆ ಮಾತಾಡು," ಅಥವಾ "ಗೊಣಗುಟ್ಟು"[7] ಇದು ಸ್ವಲ್ಪ ಆಶ್ಚರ್ಯವಾಗಿದೆ ಈ ಕೆಲಸಗಾರರು ಹೊಲದ ಯಜಮಾನನ ವಿರುದ್ಧವಾಗಿ ಗೊಣಗುಟ್ಟಿರಬೇಕು ಮುಂದಿನ ಕೆಲಸಕ್ಕಾಗಿ ಅವರು ವಿಶ್ವಾಸ ಇಟ್ಟಿರಬಹುದು.

**ವಚನ 12.** ಈ ಕೆಲಸಗಾರರು - ಇವರು ಒಂದು ತಾಸು ಹೊತ್ತು ಮಾತ್ರ ಕೆಲಸ ಮಾಡಿದ್ದಾರೆ, ನಾವು ದಿನವೆಲ್ಲಾ ಬಿಸಲಿನಲ್ಲಿ ಕೆಲಸ ಮಾಡಿ ಕಷ್ಟಪಟ್ಟಿದ್ದೇವೆ, ಇವರನ್ನು ನಮಗೆ ಸಮಮಾಡಿದ್ದೀಯೇ ಎಂದು ಹೊಲದ ಯಜಮಾನನ ವಿರುದ್ಧವಾಗಿ ಗುಣಗುಟ್ಟಿದರು. ಬೆಳ್ಳಿಗೆ 6.00 ಗಂಟೆಗೆ ಬಂದವರು ಈ ಯಜಮಾನನು ಎರಡು ತಪ್ಪುಗಳನ್ನು ಮಾಡಿದನೆಂದು ಆರೋಪಿಸಿದರು. ಮೊದಲನೆಯದಾಗಿ, ಅವರು ಈತನು ಅನ್ಯಾಯಗಾರನಾಗಿದ್ದಾನೆ, ಆತನು ಹನ್ನೆರಡು ಗಂಟೆ ಕೆಲಸ ಮತ್ತು ಒಂದು ಗಂಟೆಯ ಕೆಲಸ ವ್ಯತ್ಯಾಸ ಮಾಡಲಿಲ್ಲ. ಎರಡನೆಯದು, ಅವರು ಆತನ ಒಂದು ಹಿತಚಿಂತನೆ ಇಲ್ಲದಿರುವದು ಆರೋಪಿಸಿದರು, ಆತನು ಮಧ್ಯಾಹ್ನದ ಉರಿಬಿಸಿಲು ಮತ್ತು ಸಾಯಂಕಾಲದ ತಣ್ಣನೆಯ ವಾತವರಣದ ವ್ಯತ್ಯಾಸ ಗುರುತಿಸಲಿಲ್ಲ ಎಂದು ಹೇಳಿದರು.[8] "ಉರಿಯುವ ಬಿಸಿಲು" (*kausōn*) ಎನ್ನುವ ಪದವು ಸೂರ್ಯನು ಸುಡುವ ಬಿಸಿಲನ್ನು ಸೂಚಿಸಬಹುದು. ಏನೇ ಆದರೂ, ಅದನ್ನು ಉರಿಯುವ ಪೂರ್ವಗಾಳಿ, ಎಂತಲೂ ಅದನ್ನು "ತೇವಭರಿತ ಬಿಸಿಗಾಳಿ" ಯೆಂದು ಸಹ ಹೇಳಲಾಗುತ್ತದೆ. ಈ ಉರಿಯುವ ಗಾಳಿ "ಕೆಲವು ಸಾರಿ ಕೆಲಸಗಾರರನ್ನು ಹೊಲದಿಂದ ಓಡಿಸಿಬಿಡುತ್ತದೆ."[9]

**ವಚನಗಳು 13-15.** ಈ ಕೆಲಸಗಾರರು ಹೊಲದ ಯಜಮಾನನಿಗೆ ಯಾವುದೇ ಮರ್ಯಾದೆ ಕೊಡುವ ಪದವನ್ನು ಬಳಸಲಿಲ್ಲ (20:12). ಅದಕ್ಕೆ ಭಿನ್ನವಾಗಿ, **ಆತನು** ಅವರಿಗೆ ಮಾತಾಡುವಾಗ **ಅವರಲ್ಲಿ ಒಬ್ಬನಿಗೆ ಸ್ನೇಹಿತನೆಂದು** (*hetairos*) ಕರೆದನು. ಈ ಪದವನ್ನು ಕೆಲವು ಸಾರಿ "ಸಹಜವಾಗಿ ಹೆಸರು ಗೊತ್ತಿರದವರನ್ನು ಸಂಬೋಧಿಸಿ ಕರೆಯಲು ಇದನ್ನು ಸಾಮಾನ್ಯವಾಗಿ ಕರೆಯುತ್ತಿದ್ದರು."[10] ಇದನ್ನು ಗದರಿಸುವದಕ್ಕಾಗಿ ಹಾಸ್ಯಸ್ಪದವಾಗಿ ಕರೆಯಲು ಈ ಪದವನ್ನು ಉಪಯೋಗಿಸುತ್ತಿದ್ದರು (22:12; 26:50), ಮತ್ತು ಇಂಥಹ ಸನ್ನಿವೇಶ ಇಲ್ಲಿ ಇದ್ದಿರಬಹುದು. ಈ ಶಬ್ದವು *philos*, ಎನ್ನುವ ಶಬ್ದದಿಂದ ವ್ಯತ್ಯಾಸವುಳ್ಳದ್ದಾಗಿದೆ. ಕೂಲಿಕೆಲಸಗಾರರನು "ಸ್ನೇಹಿತ" ನೆಂದು ಸಮಾನತೆಯಲ್ಲಿ ಕಾಣಲು ಆಗುವದಿಲ್ಲ ಎನ್ನುವದು ತೋರಿಸುತ್ತದೆ. ಕೆಲಸಮಾಡುವ ನೀತಿತತ್ವದ ಆಧಾರದ ಮೇಲೆ ಬಡವರನ್ನು ಕೆಲಸ ಮಾಡುವ ಸ್ಥಳದಲ್ಲಿ ಈ ಹೊಲದ ಯಜಮಾನನು ತೋರಿಸಿದ ಒಲವು ಕಂಡುಬರುವದಿಲ್ಲ. ಬಡವನು ಮಾಡುವ ಕೆಲಸಕ್ಕೆ ಕೊಡುವ ಕೂಲಿಯು ಅದು ಅವನಿಗೆ "ಕೃಪೆ, ದಯೆ" ಎಂದು ಪರಿಗಣಿಸಲಾಗುತ್ತದೆ.[11]

ಹೊಲದ ಯಜಮಾನನು ಒಬ್ಬನಿಗೆ, **ಏನಪ್ಪಾ, ನಾನು ನಿನಗೆ ಅನ್ಯಾಯಮಾಡಲಿಲ್ಲ; ನೀನು ನನ್ನ ಸಂಗಡ ಒಂದು ಪಾವಲಿಗೆ ಒಡಂಬಟ್ಟಿಯಲ್ಲಾ** ಎಂದು ಹೇಳಿದನು. ಆತನು ಅವರ ಮೂಲ ಒಪ್ಪಂದವನ್ನು ನೆನಪುಮಾಡಿದನು. ಆತನು ಅವರಿಗೆ ಮೋಸ ಮಾಡಲಿಲ್ಲ, ಅವರಿಗೆ ಕೊಡುವ ಹಣಕ್ಕಾಗಿ ಆತನು ಒಪ್ಪಂದ ಮಾಡಿಕೊಂಡಿದ್ದಾನೆ.

ಆ ವ್ಯಕ್ತಿಯು ಮುಂದುವರಿಸಿ, **ನಿನ್ನ ಕೂಲಿ ತಕ್ಕೊಂಡು ಹೋಗು** ಎಂದು ಹೇಳಿದನು. ಈ ಜನರಿಗೆ ಯಾವುದೇ ಅನ್ಯಾಯ ಮಾಡಲಿಲ್ಲ, ಅವರು ತಮ್ಮ ಕೂಲಿಹಣವನ್ನು ತೆಗೆದುಕೊಂಡು ತೃಪ್ತರಾಗಬೇಕಾಗಿತ್ತು. ಅವರು ಪಡೆದುಕೊಂಡಿರುವ ಪಾವಲಿಯು ತಮ್ಮ ಕುಟುಂಬಕ್ಕೆ

ಬೇಕಾಗುವಷ್ಟು ಆಹಾರ ಅವರು ಕೊಂಡುಕೊಳ್ಳಬಹುದಾಗಿತ್ತು.

ಹೊಲದ ಯಜಮಾನನು ಇನ್ನು ಅದಕ್ಕೆ ಸೇರಿಸಿ ಹೀಗೆ ಹೇಳಿದನು, **ನಿನಗೆ ಕೊಟ್ಟಂತೆ ಕಡೆಗೆ ಬಂದ ಇವನಿಗೂ ಕೊಡುವದಕ್ಕೆ ನನಗೆ ಮನಸ್ಸುಂಟು** ಎಂದನು. ಕೊನೆಗೆ ಬಂದವರಿಗೂ ಆತನು ಕರುಣೆ ತೋರಿಸಲು ಸಂಶಯಪಡಲಿಲ್ಲ. ಆತನು ಅವರಿಗೆ ಕೇವಲ ಒಂದು ಗಂಟೆಯ ಕೂಲಿ ಹಣ ಕೊಟ್ಟಿದ್ದರೆ, ಆ ಜನರಿಗೆ ತಮ್ಮ ಕುಟುಂಬದವರೆಲ್ಲರಿಗೆ ಅವಶ್ಯ ವಾಗಿ ಬೇಕಾಗುವದೆಲ್ಲವು ಪಡೆದುಕೊಳ್ಳಲು ಆಗುವದಿಲ್ಲ.

ಮೊದಲನೆ ಕೆಲಸಗಾರರು ಅವರ ಸ್ಥಳದಲ್ಲಿ ಇಟ್ಟನು, ಹೊಲದ ಯಜಮಾನನು ವಾಕ್ಚಾತುರ್ಯದ ಪ್ರಶ್ನೆ ಅವರಿಗೆ: **ನನ್ನ ಬದುಕನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೋ** ಎಂದು ಕೇಳಿದನು. ಅವನು ತನ್ನ ಹಣವನ್ನು ತನ್ನ ಇಷ್ಟ ಬಂದ ಹಾಗೆ ಮಾಡುವಾಗ ಅದನ್ನು ತಪ್ಪಾದ ಕಾರ್ಯವೆಂದು ಆರೋಪಿಸುವದು ಯಾಕೆ? ನಿರ್ದಿಷ್ಟವಾಗಿ, ಅವನು ತನ್ನ ಎಲ್ಲಾ ಕಾರ್ಯಕರ್ತರಿಗೆ ಸರಿಯಾದ ಪ್ರತಿಫಲವನ್ನೇ ಕೊಟ್ಟಿದ್ದಾನೆ - ಅವರು ಯಾವಾಗ ಕೆಲಸ ಪ್ರಾರಂಭ ಮಾಡಿದರೋ ಬೇಕಾಗಿಲ್ಲ - ಅವರಿಗೆ ಎಷ್ಟು ಹಣ ಕೊಡುತ್ತಾನೇ ಆ ವಿಷಯ ಬೇಕಾಗಿಲ್ಲ.

ಆ ವ್ಯಕ್ತಿ, **ನಾನು ಒಳ್ಳೆಯವನಾಗಿರುವದು ನಿನ್ನ ಕಣ್ಣನ್ನು ಒತ್ತುತ್ತದೊ** ಎಂದು ಹೇಳುತ್ತಾ ಮುಕ್ತಾಯ ಮಾಡುತ್ತಾನೆ. ಗ್ರೀಕ್ ಭಾಷೆಯಲ್ಲಿ "ಹೊಟ್ಟೆ ಕಿಚ್ಚು" (*ponēros*) ಎನ್ನುವ ಶಬ್ದವನ್ನು "ದುಷ್ಟತನ" (ನೋಡಿರಿ KJV) ಎಂದು ಅನುವಾದಿಸಲಾಗಿದೆ. ಏನೇ ಆದರೂ, "ದುಷ್ಟ ಕಣ್ಣು" ಇರುವಾಗ ಅದರ ಅರ್ಥ "ಜಿಪುಣ," "ಧನಲೋಭಿ," ಅಥವಾ "ಹೊಟ್ಟೆಕಿಚ್ಚು" (ನೋಡಿರಿ 6:23ರ ಮೇಲಿನ ವ್ಯಾಖ್ಯಾನ). ಉದಾರಿಯಾಗಿರುವವನು (*agathos*) ಕೆಲವು ಸಾರಿ ಇದನ್ನು "ಒಳ್ಳೆಯವನು" (ನೋಡಿರಿ KJV) ಎಂದು ಅನುವಾದಿಸಲಾಗಿದೆ. ಇದು ಹಿಂದಿನ ಅಧ್ಯಾಯದಲ್ಲಿ ಕಾಣುತ್ತೇವೆ, ಅಲ್ಲಿ ಯೇಸು ಹೇಳಿದ್ದೇನೆಂದರೆ, "ಒಳ್ಳೆಯವನು ಒಬ್ಬನೇ" ಆತನ ಹೆಸರು ದೇವರು (19:17). ಇಲ್ಲಿರುವ ಸಮಸ್ಯೆ ಹೀಗಿದೆ. ಮೊದಲು ಬಂದ ಕೆಲಸಗಾರರು ಯಜಮಾನನು ಕೆಲವು ಗಂಟೆಗಳ ಕಾಲ ಮಾತ್ರ ಕೆಲಸ ಮಾಡಿದವರಿಗೂ ಉದಾರತೆ ತೋರಿಸಿದರ ಕುರಿತಾಗಿ ಹೊಟ್ಟೆಕಿಚ್ಚು ಪಟ್ಟುಕೊಂಡರು. ಅಸೂಯೆ ಬಂದಿರುವದು ಒಂದು ಕಾರಣದ ಆಧಾರದ ಮೇಲೆ ಅಲ್ಲ; ಇದು ಸ್ವಾರ್ಥದ ಆಧಾರದ ಮೇಲೆ ಬಂದಿದೆ.

**ವಚನ 16.** ಯೇಸು ಈ ಸಾಮ್ಯವನ್ನು ಈ ಮಾತುಗಳನ್ನು ಹೇಳುವದರ ಮುಖಾಂತರ. **ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು ಎಂದು ಹೇಳಿದನು.** ಈ ಹೇಳಿಕೆಯು 19:30ಕ್ಕೆ ಸಮವಾಗಿರುತ್ತದೆ; ಇವುಗಳನ್ನು ಸಾಮ್ಯಗಳ ಅಂತಿಮ ಮುಕ್ತಾಯವೆಂದು ಹೇಳಲಾಗುತ್ತದೆ. ಕ್ರಮವನ್ನು ಹಿಂದೆ ಮುಂದೆ ಮಾಡಿ ಹೇಳಲಾಗಿದೆ, ಸ್ವಾಭಾವಿಕವಾಗಿ ರಚನೆ ಮಾಡಲಾಗಿದೆ:

A1: "ಆದರೆ ಬಹುಮಂದಿ ಮೊದಲಿನವರು ಕಡೆಯವರಾಗುವರು;<br>
    B1: ಮತ್ತು ಕಡೆಯವರು ಮೊದಲಿನವರಾಗುವರು" (19:30).<br>
    B2: "ಅದರಿಂದ ಕಡೆಯವರು ಮೊದಲಿನವರಾಗುವರು,<br>
A2: ಮತ್ತು ಮೊದಲಿನವರು ಕಡೆಯವರಾಗುವರು" (20:16).

ಈ ಸಾಮ್ಯದ ಅರ್ಥವು ಪೇತ್ರನು ಕೇಳಿದ ಪ್ರಶ್ನೆಗೆ ಸಂಬಂಧವನ್ನು ಕಲ್ಪಿಸಲಾಗಿದೆ (19:27). ಯೇಸು ಅವನಿಗೆ ಮತ್ತು ಅಂಥಹ ಸಮ ಮನಸ್ಕದವರಿಗೆ ದೇವರ ರಾಜ್ಯದಲ್ಲಿ ಸೇವೆ ಮಾಡಿದಾಗ ಏನು ಪಡೆದುಕೊಳ್ಳುತ್ತೇವೆ ಎಂದು ಚಿಂತಿಸಬೇಡಿರಿ ಎಂದು ಹೇಳಿದನು. ಅದರ ಬದಲಾಗಿ, ಅವನು ಸ್ವೀಕರಿಸಿದ ಫಲಕ್ಕಾಗಿ ಅವನು ಕೃತಜ್ಞತೆಯಿಂದ ಇರಬೇಕು. ಯೇಸುವಿನ ಹಿಂಬಾಲಕರು ತಡವಾಗಿ ದೇವರ ರಾಜ್ಯದಲ್ಲಿ ಬಂದವರ ಕುರಿತಾಗಿ

ಅಸಮಾಧಾನ ಹೊಂದಿಕೊಳ್ಳಬಾರದು, ಆದರೆ ಅವರು ದೇವರ ರಾಜ್ಯದಲ್ಲಿ ಬಂದಿರುವದಕ್ಕೆ ಆತನು ಸಂತೋಷಪಡಬೇಕು. ಯಾರು ಆ ಜವಾಬ್ದಾರಿಗಾಗಿ ಕಾಯ್ದಿರಿಸಲ್ಪಟ್ಟಿದ್ದಾರೋ ಅವರಿಗೆ ಫಲಾಪೇಕ್ಷೆಯನ್ನು ಬಿಟ್ಟು ಕೊಡಬೇಕು.[12] ಕ್ರಿಸ್ತನು ನ್ಯಾಯಾದೀಶನಾಗಿದ್ದಾನೆ; ಆತನು ನಂಬಿಗಸ್ತರಿಗೆ ಬಹುಮಾನ ಕೊಡುವನು ಮತ್ತು ಅಪನಂಬಿಗಸ್ತರಿಗೆ ಶಿಕ್ಷೆಯನ್ನು ಪ್ರಕಟಿಸುವನು. ಒಬ್ಬನು ದೇವರ ರಾಜ್ಯ ಸೇರುವಾಗ ಅವನಿಗೆ ಬರುವ ಬಹುಮಾನ ಅವನ ಕೆಲಸಕ್ಕೆ ಸಂಬಳವಲ್ಲ, ಆದರೆ ಅದು ಅವನಿಗೆ ಕೃಪೆಯ ವರವಾಗಿ ಬರುತ್ತದೆ. ದೇವರ ರಾಜ್ಯವು "ಕೃಪೆಯ ಆಡಳಿತ" ವಾಗಿದೆ. ಎಲ್ಲಾ ಪ್ರಜೆಗಳು ಸಮಾನ್ಯವಾಗಿ ಸ್ವೀಕರಿಸುವರು. ಯಾರೋಬ್ಬರು ಇನ್ನೊಬ್ಬರಿಗಿಂತ ಉನ್ನತ ಸ್ಥಾನಹೊಂದುವದಿಲ್ಲ. ಯೇಸು ತಾನಾದರೂ ದೇವರ ರಾಜ್ಯದಲ್ಲಿ ವಿಶೇಷ ಬಹುಮಾನಗಳು ಇವೆ ಎಂದು ಪ್ರಕಟಿಸಿದನು (5:19; 10:41, 42; 19:28), ಸಾಮಾನ್ಯವಾಗಿರುವ ಬಹುಮಾನ ಅದು ದೇವರ ರಾಜ್ಯದಲ್ಲಿ ಸೇರುವದು ಮತ್ತು ಹಂಚಿಕೊಳ್ಳುವದು, ಎಲ್ಲಾ ಪ್ರಜೆಗಳು ಸಮಾನ ವಾಗಿದ್ದಾರೆ.[13]

## ಸಮೀಪವಾಗುತ್ತಿರುವ ತನ್ನ ಮರಣದ ಕುರಿತು ಯೇಸು ಮೂರನೇ ಸಾರಿ ಪ್ರಕಟಿಸಿದ್ದು (20:17-19)

**[17]ಯೇಸು ಯೆರೂಸಲೇಮಿಗೆ ಹೋಗುತ್ತಿರುವಾಗ ಹನ್ನೆರಡು ಮಂದಿ ಶಿಷ್ಯರನ್ನು ಒತ್ತಟ್ಟಿಗೆ ಕರೆದುಕೊಂಡು ದಾರಿಯಲ್ಲಿ ಅವರಿಗೆ - [18]ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ; ಮತ್ತು ಮನುಷ್ಯಕುಮಾರನನ್ನು ಮಹಾಯಾಜಕರ ಮತ್ತು ಶಾಸ್ತ್ರಿಗಳ ಕೈಗೆ ಹಿಡುಕೊಡುವರು. [19]ಅವರು ಅವನಿಗೆ ಮರಣದಂಡನೆಯನ್ನು ವಿಧಿಸಿ ಅವನನ್ನು ಅಪಹಾಸ್ಯ ಮಾಡುವದಕ್ಕೂ ಕೊರಡೆಗಳಿಂದ ಹೊಡೆಯುವದಕ್ಕೂ ಶಿಲುಬೆಗೆ ಹಾಕುವದಕ್ಕೂ ಅನ್ಯರ ಕೈಗೆ ಒಪ್ಪಿಸುವರು; ಅವನು ಸತ್ತ ಮೂರನೆಯ ದಿನದಲ್ಲಿ ಜೀವಿತವಾಗಿ ಎಬ್ಬಿಸಲ್ಪಡುವನು ಎಂದು ಹೇಳಿದನು.**

ಮಾನವೀಯತೆ ವಿಷಯದಲ್ಲಿ ಮತ್ತು ಉನ್ನತವಾದ ವಿಷಯದಲ್ಲಿ (20:16) ಯೇಸುವಿನ ಜೀವಿತದಲ್ಲಿ ಅದು ಮಾದರಿಯಾಗಿದೆ. ಆತನು ತನ್ನ ತಿರಸ್ಕಾರದ ಮರಣದಲ್ಲಿ ಕಡೆಯವನಾದನು, ಆದರೂ ತನ್ನ ಪುನರುತ್ಥಾನದಲ್ಲಿ "ಮೊದಲಿಗ" ನಾದನು. ಯೇಸು ತನ್ನ ಹನ್ನೆರಡು ಜನ ಶಿಷ್ಯರಿಗೆ ತನ್ನ ಮರಣದ ಕುರಿತು ಹೇಳುವದು ಇದು ಮೂರನೆ ಸಾರಿಯಾಗಿದೆ (16:21; 17:22, 23; 20:18, 19).[14] ಆತನು ಮುಂದೆ ಆಗುವದನ್ನು ಕ್ರಮವಾಗಿ ಅವರಿಗೆ ಪುನಃ ಹೇಳುತ್ತಾ ಅವರನ್ನು ತನ್ನ ಶಿಲುಬೆ ಮರಣಕ್ಕೆ ಸಿದ್ಧಮಾಡುತ್ತಿದ್ದನು. ಅದಕ್ಕೆ ಸರಿಯೆಂಬಂತೆ, ಮತ್ತಾಯನು ಯೇಸುವಿನ ಅಂತಿಮ ಗುರಿಯನ್ನು ತನ್ನ ಓದುಗರಿಗೆ ಕ್ರಮವಾಗಿ ಬಿಂಬಿಸಿದ್ದಾನೆ ಅದನ್ನು ಕ್ರಮವಾಗಿ ದಾಖಲಿಸಿದ್ದಾನೆ. ಶಿಷ್ಯರು ನಿರ್ದಿಷ್ಟವಾಗಿ ದೇವರ ರಾಜ್ಯಕ್ಕಾಗಿ ತ್ಯಾಗಗಳನ್ನು ಮಾಡುತ್ತಿರುವಾಗಲೇ (19:27-29), ಯೇಸು ತನ್ನ ಅಂತಿಮ ತ್ಯಾಗ ಪ್ರಾಯಶ್ಚಿತ್ತದ ಮರಣವನ್ನೇ ಹೊಂದಿದನು.

**ವಚನ 17. ಯೇಸು** ಮತ್ತು ಆತನ ಹಿಂಬಾಲಕರು ಇನ್ನೂ ಯೂದಾಯ ಪ್ರಾಂತದಲ್ಲಿ ಇದ್ದಿರಬಹುದು (19:1), ಅಥವಾ ಅವರು ಯೆರಿಕೋವಿಗೆ ಪ್ರಯಾಣ ಮಾಡಬೇಕಾಗಿದ್ದರಿಂದ ಈಗಾಗಲೇ ಯೋರ್ದಾನ್ ನದಿಯನ್ನು ದಾಟಿಕೊಂಡು ಬಂದಿರಬಹುದು (20:29). ಮಾರ್ಕ 10:32 ಹೇಳುವದೇನೆಂದರೆ "ಯೇಸು ಅವರ ಮುಂದೆ ನಡೆದುಕೊಂಡು ಹೋಗುತ್ತಿದ್ದನು," ಅಲ್ಲಿ ಆತನನ್ನು ಹಿಂಬಾಲಿಸಿದವರು ಅದನ್ನು ನೋಡಿ "ಅತ್ಯಾಶ್ಚರ್ಯಪಟ್ಟರು" ಮತ್ತು "ಭಯಗೊಂಡರು." ಅವರಿಗೆ **ಯೆರೂಸಲೇಮಿಗೆ ಹೋಗುವ** ಸಮಯ ಹತ್ತಿರವಾಗಿತ್ತು, ಅದರಿಂದ ಕರ್ತನು **ಹನ್ನೆರಡು ಮಂದಿ ಶಿಷ್ಯರನ್ನು ಒತ್ತಟ್ಟಿಗೆ ಕರೆದುಕೊಂಡು** ಮುಂದೆ

ಪಟ್ಟಣದಲ್ಲಿ ಇರುವದನ್ನು ಅವರಿಗೆ ವೈಯಕ್ತಿಕವಾಗಿ ಹೇಳಿದನು.

**ವಚನಗಳು 18, 19.** ದೃಢ ನಿರ್ಧಾರದೊಂದಿಗೆ, ಯೇಸು **ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ** ಎಂದು ಹೇಳಿದನು. ಗಲಿಲಾಯ ಬಿಡುವದಕ್ಕಿಂತ ಮೊದಲು ಕರ್ತನು "ದೃಢನಿಶ್ಚಯದಿಂದ ತನ್ನ ಮುಖವನ್ನು ಯೆರೂಸಲೇಮಿನೆಡೆಗೆ ತಿರುಗಿಸಿದನು" (ಲೂಕ 9:51; NKJV); ಆ ಸಮಯದವರೆಗೆ ಆತನಿಗೆ ಯಾವುದೇ ವಿಷಯ ಆ ಗುರಿಯಿಂದ ಹಿಮ್ಮೆಟ್ಟಿಸಲಿಲ್ಲ.

ಈ ಭಾವೋದ್ರೇಕದ ಪೂರ್ವ ವೀಕ್ಷಣೆಯು ವಿವರವಾಗಿ ಸುವಾರ್ತೆಗಳಲ್ಲಿ ಯೇಸು ಹೇಳಿರುವ ಸಂಗತಿಯು ಆತನು ಯೆಹೂದ್ಯರ ಕೈಗಳಿಗೆ ಮತ್ತು ರೋಮನ್ನರಿಗೆ ಒಪ್ಪಿಸಿಕೊಡುವದರ ಕುರಿತು ಹೇಳಲಾಗಿದೆ. ಯೇಸು ತನ್ನ ಮರಣದ ಕುರಿತು ಆಗುತ್ತಿರುವ ಬೆಳವಣಿಗೆಗಳನ್ನು ಗ್ರಹಿಸಿಕೊಂಡಿದ್ದನು. ಮೊದಲು, ಆತನು "ಮನುಷ್ಯಕುಮಾರನನ್ನು ಮಹಾಯಾಜಕರಿಗೂ ಮತ್ತು ಶಾಸ್ತ್ರಿಗಳಿಗೂ ಒಪ್ಪಿಸಿಕೊಡುವರು" ಎಂದು ಹೇಳಿದನು. ಇದೆಲ್ಲವು ಯೂದನು ಆತನನ್ನು ನಂಬಿಕೆದ್ರೋಹ ಮಾಡಿದಾಗ ಮತ್ತು ಗೆತ್ಸೆಮನೆ ತೋಟದಲ್ಲಿ ಆತನನ್ನು ಕಾವಲು ಕಾಯುವರು ಆಗ ಅದೆಲ್ಲವು ನೆರವೇರುವದು (26:47). ಎರಡನೆಯದಾಗಿ, ಆತನನ್ನು ಹಿರಿ ಸಭೆಯ ಮುಂದೆ ತೆಗೆದುಕೊಂಡು ಹೋಗುವರು, ಈ ಮಂಡಳಿಯು ಹೆಚ್ಚಾಗಿ ಯಾಜಕರು ಮತ್ತು ಶಾಸ್ತ್ರಿಗಳನ್ನು ಒಳಗೊಂಡಿರುತ್ತದೆ (26:57). ಈ ಮಹಾ ಸಭೆಯು ಆತನಿಗೆ ಮರಣದಂಡನೆಯನ್ನು ಕೊಡುವ ನಿರ್ಧಾರ ಮಾಡುವದು (27:1), ಆದರೆ ಆ ಕಾರ್ಯವನ್ನು ಜಾರಿಗೊಳಿಸುವ ಅಧಿಕಾರ ಅವರಿಗೆ ಇಲ್ಲ (ನೋಡಿರಿ 1:19; 10:18; 12:14ರ ಮೇಲಿನ ವ್ಯಾಖ್ಯಾನ). ಅದರ ನಿಮಿತ್ತವಾಗಿ, ಅವರು ಯೇಸುವನ್ನು ಅನ್ಯರಿಗೆ ಒಪ್ಪಿಸಿಕೊಡುತ್ತಾರೆ, ಅವರಿಗೆ ಮರಣದಂಡನೆ ಕೊಡುವ ಅಧಿಕಾರ ಅವರಿಗಿದೆ. "ಅನ್ಯರು" ಅಧಿಪತಿಯಾಗಿರುವ ಪೀಲಾತನನ್ನು ಪ್ರಧಾನನೆಂದು ಸೂಚಿಸುವರು (27:2). ಅವನು ಯೇಸುವನ್ನು ತನ್ನ ಸೈನಿಕರಿಗೆ ಒಪ್ಪಿಸಿದನು ಅದರಿಂದ ಅವರು ಯೇಸುವನ್ನು ಅಪಹಾಸ್ಯ ಮಾಡುವರು ಮತ್ತು ಚಡಿಏಟುಗಳನ್ನು ಆತನಿಗೆ ಕೊಡುವರು (27:27-30; ಮಾರ್ಕ 15:15). ಈ ಅವಮಾನ ಮತ್ತು ನೋವು ಅನುಭವಿಸಿದ ನಂತರ, ಯೇಸು ಗೊಲ್ಗೋಥಾಗೆ ಹೋಗುವನು ಆಗ ಅವರು ಆತನಿಗೆ ಶಿಲುಬೆಗೆ ಏರಿಸುವರು (27:31).

ಯೇಸು ಯಾವ ರೀತಿಯಲ್ಲಿ ಸಾಯುತ್ತಾನೆಂದು ಈ ಮೊದಲೇ ಮತ್ತಾಯನ ಸುವಾರ್ತೆಯಲ್ಲಿ ಹೇಳಿರುವವುಗಳಲ್ಲಿ ವಿವರಿಸುವದಿಲ್ಲ (16:21; 17:22, 23). ಈ ಸಮಯದವರೆಗೆ, ಆತನ ಶಿಲುಬೆಯ ಶ್ರಮೆ ಕೇವಲ ಸೂಕ್ಷ್ಮವಾಗಿ ಅವರು ತಿಳಿದುಕೊಂಡದ್ದು ಶಿಷ್ಯರು ಆತನ ಶಿಲುಬೆಯನ್ನು ತೆಗೆದುಕೊಂಡು ಹೋಗುವರು ಮತ್ತು ಆತನನ್ನು ಹಿಂಬಾಲಿಸುವರು ಎನ್ನುವಂಥಾದ್ದಾಗಿದೆ (10:38; 16:24). ಯೇಸುವಿನ ಶಿಲುಬೆ ಮರಣದ ಆಲೋಚನೆ, ಏನೇ ಆದರೂ, ಇಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆಸಕ್ತಿಯಿಂದ, ಮತ್ತಾಯನು ಮಾತ್ರ ಸುವಾರ್ತೆಯಲ್ಲಿ ಅಂಶಸೂಚಿಯು ಹೇಳುತ್ತಾ "ಶಿಲುಬೇಗೇರಿಸು" (*stauroō*) ಎನ್ನುವ ಪದ ಉಪಯೋಗಿಸಿದ್ದಾನೆ ಈ ಶಬ್ದವು ಯೇಸುವಿನ ಶ್ರಮೆಯನ್ನು ವರದಿಮಾಡುತ್ತದೆ; ಮಾರ್ಕ ಮತ್ತು ಲೂಕ ಅವರು ಇದರ ಬದಲಾಗಿ "ಕೊಲ್ಲು" (*apokteinō*) ಎನ್ನುವ ಶಬ್ದ ಉಪಯೋಗಿಸಿದ್ದಾರೆ (ಮಾರ್ಕ 10:34; ಲೂಕ 18:33).

ಶಿಲುಬೆಗೇರಿಸುವದು ಯೆಹೂದ್ಯರು ಮರಣದಂಡನೆಗೆ ಕೊಡುವ ಶಿಕ್ಷೆಯಾಗಿರಲಿಲ್ಲ. ಯೆಹೂದ್ಯರು ಕಲ್ಲೆಸೆದು, ಸುಡುವದು, ತಲೆಕಡಿಸುವದು ಅಥವಾ ಕುತ್ತಿಗೆ ಹಿಸುಕಿಕೊಲ್ಲುವದು ಆಗಿತ್ತು.[15] ಅನ್ಯರು - ಪ್ರಖ್ಯಾತಿ ಹೊಂದಿದರು, ರೋಮಾನ್ನರು ಈ ಅವಧಿಯಲ್ಲಿ - ಅತಿ ಕೀಳು ಮಟ್ಟದ ಜನರನ್ನು ಅಂದರೆ ವಿದೇಶಿಯರನ್ನು, ಗುಲಾಮರನ್ನು, ಮತ್ತು ಅಪರಾಧಿಗಳನ್ನು ಶಿಲುಬೆಗೇರಿಸಿ ಕೊಲ್ಲುತ್ತಿದರು.[16]

**ಅಂತಿಮವಾಗಿ,** ಯೇಸು ಮೂರನೆಯ ದಿನದಲ್ಲಿ ಎದ್ದು ಬರುತ್ತೇನೆಂದು ಮೊದಲೇ ಆತನು

ಕಾಲಜ್ಞಾನವನ್ನು ಹೇಳಿದನು. ಆತನು ಮರಣ ಹೊಂದಿದ ನಂತರ, ಆತನನ್ನು ಯೋಸೇಫನ ಹೊಸ ಸಮಾಧಿಯಲ್ಲಿ ಸಮಾಧಿ ಮಾಡಲಾಯಿತು (27:59, 60). ಆ ಸಮಾಧಿಯು ಆತನನ್ನು ಹಿಡಿದಿಡಲು ಆಗಲಿಲ್ಲ ಮೂರನೆಯ ದಿನದಲ್ಲಿ ಬೆಳಗಿನ ಜಾವದಲ್ಲಿ ಎದ್ದು ಬಂದನು (28:1, 7). ಮತ್ತಾಯನಲ್ಲಿ ಎಲ್ಲಾ ಮೂರು ಶ್ರಮೆಯ ಕಾಲಜ್ಞಾನಗಳು ಯೇಸುವಿನ ಪುನರುತ್ಥಾನದ ವಿಜಯದೊಂದಿಗೆ ಮುಕ್ತಾಯಗೊಂಡಿದೆ (16:21; 17:23; 20:19).

## ದೇವರ ರಾಜ್ಯದಲ್ಲಿ ಶ್ರೇಷ್ಟತೆ (20:20-28)

**[20]ಆಗ ಜೆಬೆದಾಯನ ಮಕ್ಕಳ ತಾಯಿ ಆತನಿಂದ ಏನೋ ಒಂದು ಬೇಡಿಕೊಳ್ಳಬೇ ಕೆಂದು ತನ್ನ ಮಕ್ಕಳನ್ನು ಕರಕೊಂಡು ಬಂದು ಆತನಿಗೆ ಅಡ್ಡಬಿದ್ದಳು. [21]ಆತನು ಆಕೆಯನ್ನು - ನಿನಗೇನು ಬೇಕಮ್ಮಾ ಎಂದು ಕೇಳಲು ಆಕೆ - ನಿನ್ನ ರಾಜ್ಯದಲ್ಲಿ ನನ್ನ ಈ ಇಬ್ಬರು ಮಕ್ಕಳಲ್ಲಿ ಒಬ್ಬನು ನಿನ್ನ ಬಲಗಡೆಯಲ್ಲೂ ಮತ್ತೊಬ್ಬನು ಎಡಗಡೆಯಲ್ಲೂ ಕೂತುಕೊಳ್ಳುವದಕ್ಕೆ ಅಪ್ಪಣೆಯಾಗಬೇಕು ಅಂದಳು. [22]ಅದಕ್ಕೆ ಯೇಸು - ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು. ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವದು ನಿಮ್ಮಿಂದಾದೀತೇ ಎಂದು ಕೇಳಲು ಅವರು - ಆಗುವದು ಅಂದರು. [23]ಆಗ ಆತನು ಅವರಿಗೆ - ನನ್ನ ಪಾತ್ರೆಯಲ್ಲಿ ನೀವು ಕುಡಿಯುವಿರಿ ಸರಿ; ಆದರೆ ನನ್ನ ಎಡಬಲಗಡೆಗಳಲ್ಲಿ ಕೂತುಕೊಳ್ಳುವಂತೆ ಅನುಗ್ರಹಮಾಡುವದು ನನ್ನದಲ್ಲ; ನನ್ನ ತಂದೆಯಿಂದ ಅದು ಯಾರಿಗೆಂದು ಸಿದ್ಧಪಡಿಸಿದೆಯೋ ಅವರಿಗೇ ಸಿಕ್ಕುವದು ಎಂದು ಹೇಳಿದನು.**

**[24]ಉಳಿದ ಹತ್ತು ಮಂದಿ ಶಿಷ್ಯರು ಇದನ್ನು ಕೇಳಿ ಆ ಇಬ್ಬರು ಅಣ್ಣತಮ್ಮಂದಿರ ಮೇಲೆ ಸಿಟ್ಟುಗೊಂಡರು. [25]ಆದರೆ ಯೇಸು ಅವರನ್ನು ಹತ್ತಿರಕ್ಕೆ ಕರೆದು ಅವರಿಗೆ - ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನಮಾಡುತ್ತಾರೆ, ಮತ್ತು ದೊಡ್ಡವರು ಬಲಾತ್ಕಾರದಿಂದ ಅಧಿಕಾರನಡಿಸುತ್ತಾರೆ ಎಂದು ನೀವು ಬಲ್ಲಿರಷ್ಟೆ. [26]ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; [27]ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು. [28]ಹಾಗೆಯೇ ಮನುಷ್ಯಕುಮಾರನು ಸೇವೆಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು.**

ಯೇಸುವಿನ ಶ್ರಮೆಯ ಕಾಲಜ್ಞಾಲವನ್ನು ಆತನ ಶಿಷ್ಯರು ಅದನ್ನು ಅಂಗೀಕರಿಸುವದರಲ್ಲಿ ಅಥವಾ ಆತನ ಸಂದೇಶ ಅರ್ಥಮಾಡಿಕೊಳ್ಳುವದರಲ್ಲಿ ಸೋತು ಹೋದರು. ಮೊದಲನೆಯ ಭವಿಷ್ಯವಾಣಿ ಹೇಳಿದ ತರುವಾಯ ಪೇತ್ರನು ಯೇಸುವನ್ನು ಒಂದು ಬದಿಗೆ ತೆಗೆದುಕೊಂಡು ಆತನನ್ನು ಗದರಿಸಿದನು (16:22, 23). ಕೆಲವು ಗಂಟೆಗಳ ತರುವಾಯ ಎರಡನೆಯ ಸಾರಿ ದೇವರ ರಾಜ್ಯದಲ್ಲಿ ಯಾರು ಶ್ರೇಷ್ಟರು ಎನ್ನುವ ಚರ್ಚೆ ಪ್ರಾರಂಭವಾಯಿತು (18:1-4). ಮೂರನೆಯ ಸನ್ನಿವೇಶದಲ್ಲಿ, ದೇವರ ರಾಜ್ಯದಲ್ಲಿ ಅಧಿಕಾರದ ಸ್ಥಾನಮಾನಕ್ಕಾಗಿ ಕೋರಿಕೆಗಳು ಮಾಡಲ್ಪಟ್ಟವು (20:20-28).

**ವಚನ 20. ಜೆಬೆದಾಯನ ಮಕ್ಕಳ ತಾಯಿ ಆತನಿಂದ ಏನೋ ಒಂದು ಬೇಡಿಕೊಳ್ಳಬೇ ಕೆಂದು ಬಂದಳು.** ಈ ಹೆಂಗಸು ಆತನನ್ನು ಹಿಂಬಾಲಿಸಿದ ಜನರ ಗುಂಪಿನಲ್ಲಿದ್ದವಳು, ಆತನ ಶಿಲುಬೆ ಮರಣ, ಸಮಾಧಿ, ಮತ್ತು ಖಾಲಿಯಾದ ಸಮಾಧಿ ಕುರಿತು ಸಾಕ್ಷಿ ಹೇಳುವವಳಾಗಿದ್ದಳು. ಆಕೆಯ ಹೆಸರು ಶಾಲೋಮೆ ಎಂಬುದಾಗಿ ಇತ್ತು (ಹೋಲಿಸಿ 27:56 ಮತ್ತು ಮಾರ್ಕ 15:40). ಆಕೆಯು ಯೇಸುವಿನ ತಾಯಿಯಾದ ಮರಿಯಳ ಸಹೋದರಿ ಇರಬಹುದು (27:56; ಮಾರ್ಕ 15:40; ಯೋಹಾನ 19:25). ಇದು ನಿಜವಾಗಿದ್ದಲ್ಲಿ, ಆಕೆಯು ಯೇಸುವಿನ ಚಿಕ್ಕಮ್ಮ

ಆಗುತ್ತಾಳೆ, ಮತ್ತು ಆಕೆಯ ಮಕ್ಕಳು ಯಾಕೋಬ ಮತ್ತು ಯೋಹಾನ ಅವರು ಮೊದಲು ಚಿಕ್ಕಮ್ಮನ ಮಕ್ಕಳು ಆಗಿರುತ್ತಾರೆ. ಅವರ ಮಧ್ಯದಲ್ಲಿ ಇಂಥಹ ಸಂಬಂಧವಿರುವದಕ್ಕಾಗಿ, ಆಕೆಯ ಈ ಕೋರಿಕೆ ಕೇಳುತ್ತಿರುವದು ಅದರ ಆದಾರದ ಮೇಲೆ ನ್ಯಾಯಬದ್ಧವಾಗಿದೆ.[17] ಇದಕ್ಕೆ ಇನ್ನು ಸೇರಿಸಿ ಹೇಳುವುದಾದರೆ, ಯೇಸುವಿನ ಶಿಷ್ಯರ ಒಂದು ಗುಂಪಿನಲ್ಲಿ ಇವರು ಹತ್ತಿರದ ಭಾಗವಾಗಿದ್ದರು (ನೋಡಿರಿ ವ್ಯಾಖ್ಯಾನ 17:1). ಇವರು, ಮತ್ತು ಪೇತ್ರ ಅಂದ್ರೆಯರೊಂದಿಗೆ ಯೇಸು ಆರಿಸಿಕೊಂಡಿರುವ ಶಿಷ್ಯರಲ್ಲಿ ಮೊದಲಿನವರಾಗಿದ್ದರು (4:18-22).

ಮಾರ್ಕನ ಸುವಾರ್ತೆಯಲ್ಲಿ ಜೇಬೆದಾಯನ ಹೆಂಡತಿ ಎಂದು ಸೂಚಿಸಿರುವದಿಲ್ಲ ಇಲ್ಲಿ ಯಾಕೋಬ ಮತ್ತು ಯೋಹಾನರಿಬ್ಬರೂ ಕೋರಿಕೆಯೊಂದಿಗೆ ಯೇಸುವಿನ ಬಳಿಗೆ ಬಂದರು ಎಂದು ಹೇಳಲಾಗಿದೆ (ಮಾರ್ಕ 10:35-37). ಮತ್ತಾಯನ ಸುವಾರ್ತೆಯಲ್ಲಿ, ಆ ಮೂರು ಜನ ಯೇಸುವಿನ ಬಳಿಗೆ ಬಂದರು, ಆದರೆ ಕೋರಿಕೆಯು ತಾಯಿಯಿಂದ ಕೇಳಲ್ಪಟ್ಟಿತು. ಈ ಕಥೆಯು ಮುಂದುವರಿದಂತೆ, ಶಾಲೋಮೆ ಅವರ ಕೊರಿಕೆ ಆಕೆಯ ಮಕ್ಕಳ ಆಸೆಯನ್ನು ಪ್ರತಿಬಿಂಬಿಸುತ್ತದೆ (20:22, 24). ಯೇಸುವಿನ ಕಾಲದಲ್ಲಿ, ಅಧಿಕಾರದಲ್ಲಿರುವವರಿಗೆ ಒಬ್ಬ ಮಕ್ಕಳ ತಾಯಿ ನೇರವಾಗಿ ಹೋಗಿ ಕೇಳುವ ಪರಿಸ್ಥಿತಿ ಇರಲಿಲ್ಲ ಅದು ಅಸಹಜವೆನ್ನಿಸುತ್ತಿತ್ತು. ಹಳೆ ಒಡಂಬಡಿಕೆಯಲ್ಲಿ ಬೆತ್ಷೆಬೆ ತನ್ನ ಮಗನಾದ ಸೊಲೊಮೋನನಿಗೆ ತನ್ನ ಸಿಂಹಾಸನವನ್ನು ಕೊಡಬೇಕೆಂದು ಕೇಳಿಕೊಂಡಳು (1 ಅರಸುಗಳು 1:15-21).[18]

**ವಚನ 21.** ಪೇತ್ರನು ಕೇಳಿದ ಮೊದಲ ಪ್ರಶ್ನೆಗೆ ಆತನು ಉತ್ತರಿಸುತ್ತಾ ಯೇಸು ತನ್ನ ಅಪೊಸ್ತಲರಿಗೆ "ನೀವು ಹನ್ನೆರಡು ಸಿಂಹಾಸನಗಳ ಮೇಲೆ ಕೂತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವಿರಿ" (19:28) ಎಂದು ಹೇಳಿದನು. ಈ ವಾಗ್ದಾನವು ಬಹುಶಃ ಶಾಲೋಮೆ ಅವರ ಕೋರಿಕೆಯು ಸಹ ಒಳಗೊಂಡು ಆಕೆಯ **ಇಬ್ಬರು ಮಕ್ಕಳು** ದೇವರ **ರಾಜ್ಯದಲ್ಲಿ** ಕರ್ತನ **ಎಡಗಡೆ** ಮತ್ತು **ಬಲಗಡೆಯಲ್ಲಿ** ಕುಳಿತುಕೊಳ್ಳುವರು. ಈ ಸ್ಥಳಗಳು ಉನ್ನತವಾದ ಸ್ಥಳಗಳು - ಆಡಳಿತದಲ್ಲಿ ಪ್ರಧಾನವಾದ ಸ್ಥಾನಗಳಾಗಿವೆ. ಬಲಗಡೆ ಮೊದಲನೆಯದು ಮತ್ತು ಎಡಗಡೆಯದು ಎರಡನೆಯದಾಗಿ ಇದೆ. Josephus ರವರು ಹೀಗೆ ಹೇಳಿದ್ದಾರೆ, ರಾಜನಾದ ಸೌಲನ ಮೇಜಿನ ಬಲಗಡೆಯಲ್ಲಿ ಆತನ ಮಗ ಮತ್ತು (ಎಡಗಡೆ) ತನ್ನ ಸೈನ್ಯದ ಸೈನ್ಯಾಧಿಕಾರಿ ಸ್ಥಳವನ್ನು ಸ್ವಾಧೀನ ಮಾಡಿಕೊಂಡಿದ್ದಾರೆ.[19]

ಯಾಕೋಬ ಮತ್ತು ಯೋಹಾನ ಮತ್ತು ಅವರ ತಾಯಿ ಶಾಲೋಮೆ ದೇವರ ರಾಜ್ಯದ ಸ್ವರೂಪವನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಇತರೆ ಶಿಷ್ಯರು ಇದರ ಕುರಿತಾಗಿ ತಪ್ಪಾದ ಕಲ್ಪನೆಯನ್ನು ಯೇಸು ಪರಲೋಕ ಆರೋಹಣವಾಗುವವರೆಗೆ ಹಂಚಿಕೊಂಡರು (ಅಪೊಸ್ತಲರ ಕೃತ್ಯಗಳು 1:6). ಅವರು ಭೌತಿಕವಾದ, ಭೂಲೋಕದ ರಾಜ್ಯವನ್ನು ಎದುರು ನೋಡುತ್ತಿದ್ದರು; ಆದರೆ ಕ್ರಿಸ್ತನ ರಾಜ್ಯವು ಅದು ಆತ್ಮೀಕವಾದದ್ದು ಮತ್ತು "ಈ ಲೋಕದಲ್ಲ" (ಯೋಹಾನ 18:36).

**ವಚನ 22.** ಯಾವಾಗ **ಯೇಸು** ಪ್ರತಿಕ್ರಿಯೆ ನೀಡಿದನೋ ನೇರವಾಗಿ ಶಾಲೋಮೆಗೆ ನೀಡಲಿಲ್ಲ. ಅದರ ಬದಲಾಗಿ ಆತನು ನೆರವಾಗಿ ಯಾಕೋಬ ಮತ್ತು ಯೋಹಾನನಿಗೆ ಹೇಳಿದನು: **ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು, ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವದು ನಿಮಿಂದಾದಿತೆ?** ಆತನು ಯೆರೂಸಲೇಮಿನಲ್ಲಿ ತನ್ನ ಮರಣದ ಕುರಿತು ಸೂಚಿಸುತ್ತಿದ್ದಾನೆ. ಹಿಂದಿನ ಕಾಲದಲ್ಲಿ, ಅಪರಾಧಿಗಳಿಗೆ ಶಿಕ್ಷೆಯಾಗಿ ಅವರು ಸಾಯುವಂತೆ ಒಂದು ಲೋಟ ವಿಷವನ್ನು ಕುಡಿಯಲು ಒತ್ತಾಯ ಮಾಡುತ್ತಿದ್ದರು. ದೊಡ್ಡ ಪದವಿಯಲ್ಲಿ ಇರುವವರನ್ನು ಮೋಸದಿಂದ ಕೊಲ್ಲಲು ಅಥವಾ ಆತ್ಮ ಹತ್ಯ ಮಾಡಿಕೊಳ್ಳಲು ಇದೇ ರೀತಿಯಾಗಿ ಮಾಡಿಕೊಳ್ಳುತ್ತಿದ್ದರು. "ಪಾತ್ರೆ" ಎನ್ನುವದು ಸಂಕಟ ಮತ್ತು ಮರಣವನ್ನು ಸೂಚಿಸುವ ಗುರುತಾಗಿದೆ. ಯೇಸು ಇದನ್ನು ಆ ಒಂದು ಕಾರ್ಯಕ್ಕೆ ಸೂಚಿಸಿದ್ದಾನೆ.[20]

ತರುವಾಯ ಬಂದಿರುವ ಕೆಲವು ಗ್ರೀಕ್ ಬರಹಗಳಲ್ಲಿ ಇನ್ನೂ ಹೆಚ್ಚಿನ ಭಾಗವನ್ನು ಸೇರಿಸಿಕೊಂಡಿವೆ "ಅಥವಾ ನಾನು ತೆಗೆದುಕೊಂಡಿರುವ ದೀಕ್ಷಾಸ್ನಾನದಲ್ಲಿ ನೀವು ತೆಗೆದುಕೊಳ್ಳಬೇಕು" ಎಂದು ಸೇರಿಸಲಾಗಿದೆ. ಸಹಜವಾಗಿ, ಈ ಮಾತುಗಳು ಮಾರ್ಕ 10:38ರಲ್ಲಿ ಹೇಳಿದ್ದಕ್ಕೆ ಸರಿಸಮವಾಗಿರುವ ಮಾತುಗಳು ಶಾಸ್ತ್ರಿಗಳಿಂದ ಹೇಳಲ್ಪಟ್ಟಿವೆ.[21]

ಇಬ್ಬರೂ ಸಹೋದರರು ಯೇಸುವಿಗೆ ಉತ್ತರಿಸುತ್ತಾ "ನಾವು ಸಮರ್ಥರು" ಎಂದು ಹೇಳಿದರು. ಅವರ ಮಾತುಗಳು ಕ್ರಿಸ್ತನಿಗೆ ಭಯಭಕ್ತಿ ತೋರಿಸಿದಂತೆ ಅವರ ಸ್ವಂತ ಭರವಸೆಯನ್ನು ತೋರಿಸುತ್ತದೆ (ನೋಡಿರಿ 26:33, 35). ಹಾಗಿದ್ದರೂ, ಅವರು ನಿಜವಾಗಿಯೂ ಯೇಸುವಿನ ಮಾತಿನ ಅರ್ಥವನ್ನು ಅರ್ಥಮಾಡಿಕೊಳ್ಳಲಿಲ್ಲ.

**ವಚನ 23.** ಯಾಕೋಬ ಮತ್ತು ಯೋಹಾನನಿಗೆ ಯೇಸು ಆತನು ಕುಡಿಯುವ **ಪಾತ್ರೆಯಲ್ಲಿ** ಅವರು **ಕುಡಿಯುವರು** ಎಂದು ಹೇಳಿದನು, ಆದರೆ ಮುಖ್ಯವಾದ ಆಸನಗಳು ದೇವರ ರಾಜ್ಯದಲ್ಲಿ ಕೊಡುವದು ತನ್ನ ಕೈಯಲ್ಲಿ ಇಲ್ಲ. ಆ ನಿರ್ಧಾರವು ಪರಲೋಕದಲ್ಲಿರುವ **ತಂದೆಯದ್ದಾಗಿದೆ.**

ಆ ಸಮಯವು ಬಂದಾಗ, ಈ ಅಪೊಸ್ತಲರು ಸಂಕಟವೆಂಬ ಪಾತ್ರೆಯಲ್ಲಿಯೇ ಯೇಸು ಹೇಳಿದ ಕಾಲಜ್ಞಾನದಂತೆ ಕುಡಿದರು. ಯಾಕೋಬನು ತನ್ನ ನಂಬಿಕೆಗಾಗಿ ಮೊದಲನೆಯ ಹುತಾತ್ಮನಾದನು (ಅಪೊಸ್ತಲರ ಕೃತ್ಯಗಳು 12:1, 2). ಇದನ್ನು ನಂಬುವಾಗ ಯೋಹಾನನು ಸ್ವಾಭಾವಿಕವಾಗಿ ಮರಣಹೊಂದಿದನು, ಆತನು ತನ್ನ ಜೀವನದಲ್ಲಿ ಬಹಳವಾಗಿ ಸಂಕಟಪಟ್ಟನು. ಆದಿ ಸಭೆಯ ಕಾಲದಲ್ಲಿ, ಆತನು ಸೆರಮನೆವಾಸ ಮತ್ತು ಚಡಿ ಏಟಿಗೆ ಗುರಿಯಾದನು (ಅಪೊಸ್ತಲರ ಕೃತ್ಯಗಳು 4:3; 5:17, 18, 40). ಮೊದಲನೆ ಶತಮಾನ ಮುಗಿಯುತ್ತಿದ್ದಂತೆಯೇ, ಪದ್ಮೋಸ ದ್ವೀಪಕ್ಕೆ ಅವನನ್ನು ಗಡಿಪಾರು ಮಾಡಲಾಯಿತು. ಕೈದಿಗಳನ್ನು ಮತ ಬೇದವುಳ್ಳವರನ್ನು ದೇಶದಿಂದ ಹೊರಗೆ ಇಂಥಹ ಚಿಕ್ಕ ಚಿಕ್ಕ Aegean ಸಮುದ್ರದಲ್ಲಿರುವ ದ್ವೀಪಗಳಿಗೆ ಗಡಿಪಾರು ಮಾಡಿದರು.[22] ಪದ್ಮೋಸ ದ್ವೀಪದಲ್ಲಿರುವ ಸಮಯದಲ್ಲಿ ಯೋಹಾನನು ಪ್ರಕಟಣೆಯನ್ನು ಸ್ವೀಕರಿಸಿದನು (ಪ್ರಕಟಣೆ 1:9). ಸಂಪ್ರದಾಯ ಪ್ರಕಾರ, ಚಕ್ರಾದಿಪತಿಯ ಪ್ರಮುಖನು ಮರಣ ಹೊಂದುವ ತನಕ ಆತನು ದ್ವೀಪದಲ್ಲಿಯೇ ಉಳಿದುಕೊಂಡನು, ತರುವಾಯ ಆತನು ಮುಖ್ಯವಾದ ಸ್ಥಳಕ್ಕೆ ಹಿಂದಿರುಗಿ, ಉಳಿದ ತನ್ನ ಜೀವಿತವನ್ನು ಎಫೆಸದಲ್ಲಿ ಕಳೆದನು.[23]

**ವಚನ 24.** ಶಾಲೋಮೆ ಅವರು ತನ್ನ ಮಕ್ಕಳಾದ ಯಾಕೋಬ ಮತ್ತು ಯೋಹಾನ ಅವರಿಗಾಗಿ ಯೇಸುವಿಗೆ ಕೋರಿಕೊಳ್ಳುವಾಗ ಅದನ್ನು ಕೇಳಿಸಿಕೊಂಡ ಇತರೆ **ಹತ್ತು** ಜನ ಅಪೊಸ್ತಲರು **ಇಬ್ಬರು ಅಣ್ಣ ತಮ್ಮಂದಿರ ಮೇಲೆ ಸಿಟ್ಟುಗೊಂಡರು.** ಈ ಭಾವನಾತ್ಮಕ ಪ್ರತಿಕ್ರಿಯೆ ನೈತಿಕ ಕೋಪವಾಗಿರಲಿಲ್ಲ; ಇದು ಅವರ ಸ್ವಾರ್ಥದ ಹಿತಚಿಂತನೆ ಮತ್ತು ಅಸಮಾಧಾನವಾಗಿತ್ತು. ಬಹುಶಃ ಅವರು ಮೊದಲು ಕೇಳಲಿಲ್ಲ ಎನ್ನುವದಕ್ಕಾಗಿ ಕೋಪಗೊಂಡಿರಬಹುದು. ಅವರು ಫಿಲಿಪ್ಪಿಯ ಕೈಸರದಿಂದ ಕಪೆರ್ನೌಮಿಗೆ ಬರುತ್ತಿರುವಾಗ, ಪರಲೋಕ ರಾಜ್ಯದಲ್ಲಿ ಯಾರು ಹೆಚ್ಚಿನವನು ಎಂದು ಚರ್ಚೆ ಮಾಡುತ್ತಿದ್ದರು (18:1); ಆದರೆ ಯೇಸು ಅವರಿಗೆ ಏನು ಚರ್ಚೆ ಮಾಡುತ್ತಿದ್ದೀರಿ ಎಂದು ಕೇಳುವಾಗ, ಅವರು ಆತನಿಗೆ ಉತ್ತರಿಸಲು ಪೇಚಾಡಿದರು (ಮಾರ್ಕ 9:33, 34). ಕಡೆ ರಾತ್ರಿ ಭೋಜನದಲ್ಲಿಯೂ, ಅವರು ಯಾರು "ಹೆಚ್ಚಿನವನು" ಎಂದು ಇನ್ನೂ ವಾದ ಮಾಡುತ್ತಿದ್ದರು (ಲೂಕ 22:24). ಅವರ ಮಧ್ಯದಲ್ಲಿರುವ ಭಿನ್ನಭಿಪ್ರಾಯದಿಂದ ಯೇಸು ಅವರ ಕಾಲಗಳನ್ನು ತೊಳೆಯಲು ತೊಡಗಿಸಿಕೊಂಡನು (ಯೋಹಾನ 13:1-20).

**ವಚನ 25.** ಅಪೊಸ್ತಲರ ಕೋಪಕ್ಕೆ ಯೇಸು ಮಧ್ಯದಲ್ಲಿ ಸಮಾಧಾನ ಮಾಡುವವನಾಗಿ ಕಾರ್ಯಮಾಡುತ್ತಿದ್ದಾನೆ. ಮತ್ತೊಂದು ಸಾರಿ ಆತನು ಅನ್ಯರನ್ನು ನಕರಾತ್ಮಕ ಉದಾಹರಣೆಯಾಗಿ ತೆಗೆದುಕೊಂಡಿದ್ದಾನೆ (ನೋಡಿರಿ 5:47; 6:7, 32; 18:17). ಆತನು ತನ್ನ ಆತನ ರಾಜ್ಯವು ಅನ್ಯರ ರಾಜ್ಯದಂತೆ ಇರುವದಿಲ್ಲವೆಂದು ಹೇಳಿದನು. ಅವರಲ್ಲಿ ಆಳುವವರು

ಮತ್ತು ಹೆಚ್ಚಿನ ಮನುಷ್ಯರು - ಚಕ್ರಾದಿಪತಿಗಳು ಒಳಗೊಂಡಂತೆ, ರಾಜರುಗಳು, ಅಧಿಪತಿಗಳು, ಮತ್ತು ಇತರೆ ಅಧಿಕಾರಿಗಳು - ಅವರು ಕರ್ತನು ಅವರ ಬಲವೆಂದು ತಿಳಿದುಕೊಂಡು ಭೂಮಿಯ ಮೇಲೆ ಅವರು ಆಳುವರು. ಯೇಸು ರಾಜ್ಯವು ಆ ರೀತಿಯಾಗಿ ಇರುವದಿಲ್ಲ.

ಎಲ್ಲಾ ಅನ್ಯರು ಅನ್ಯಾಯದ ಆಡಳಿತಗಾರರಾಗಿರಲಿಲ್ಲ. ವಾಸ್ತವವಾಗಿ, ಯೆಹೂದ್ಯರು ನಿರಾಶ್ರಿತರಾಗಿ ಉತ್ತಮವಾದ ಮರ್ಯಾದೆಯೊಂದಿಗೆ ಅಲ್ಲಿದ್ದರು.[24] ಏನೇ ಆದರೂ, ಪಾಲೇಸ್ತೀನದ ಯೆಹೂದ್ಯರು ಕೆಲವು ಸಾರಿ ಪರಾಕ್ರಮಶಾಲಿಯಾಗಿರುತ್ತಿದ್ದರು. ಯೇಸುವಿನ ಭಾಷೆಯಿಂದ ಅಪೊಸ್ತಲರ ಮನಸ್ಸಿಗೆ ಇಸ್ರಾಯೇಲಿನಲ್ಲಿರುವ ರೋಮನ್ನರು ಹೆಚ್ಚಿನ ತೆರಿಗೆಯನ್ನು ಹಾಕುತ್ತಿದ್ದರು, ಸ್ವತಂತ್ರವನ್ನು ನಿರ್ಭಂಧಿಸಿದರು, ಮತ್ತು ದಬ್ಬಾಳಿಕೆಯ ಸೈನ್ಯಾಡಳಿತ ಅಲ್ಲಿತ್ತು ಎಂದು ಅವರು ತಿಳಿದುಕೊಂಡರು.[25] ಜನರ ಮನಸ್ಸಿನಲ್ಲಿಯೂ ಅವರು ತಪ್ಪಾಗಿ ನಡೆಸಿಕೊಂಡಿದ್ದರು ಮತ್ತು ಹೊಡಸಿಕೊಂಡಿದ್ದರು, ಸೈನ್ಯದ ಬಲದಿಂದ ಮಾತ್ರ ಅವರ ಸ್ವ-ಗೌರವ ಮತ್ತು ಸರಿಯಾದ ಸ್ಥಾನವನ್ನು ಈ ನೆಲದಲ್ಲಿ ಪಡೆಯಬಹುದೆಂದು ಅವರು ಆಲೋಚಿಸಿದರು.[26] ಇದು ಮೇಲ್ನೋಟದ ಸಧಾರಣ ಪರಿಸ್ಥಿತಿಯಾಗಿರಬಹುದು, ಇದು ಶಿಷ್ಯರು ಸ್ಥಾನ ಮತ್ತು ಅಧಿಕಾರಕ್ಕಾಗಿ ಅವರು ಆಸೆಪಡುವವರಾಗಿದ್ದರು ಎಂದು ಯುಕ್ತವಾದ ರೀತಿಯಲ್ಲಿ ವಿವರಿಸುತ್ತದೆ.

**ವಚನಗಳು 26, 27.** ಆತನ ಅನ್ಯರ ಕುರಿತಾಗಿ ನಕರಾತ್ಮಕ ಉದಾಹರಣೆ ಹೇಳಿದ ತರುವಾಯ, ಯೇಸು ಪರಲೋಕ ರಾಜ್ಯದಲ್ಲಿ ಯಾರು ಹೆಚ್ಚಿನವರು ಎನ್ನುವ ವಿಷಯಕ್ಕೆ ಸಂಬಂಧಿಸಿದ ಸತ್ಯವನ್ನು ಹೇಳಿದನು. ಆತನ ಬೋಧನೆಯು ಸಮನಾರ್ಥವನ್ನು ಕೊಡುವಂಥದ್ದಾಗಿತ್ತು; ನಾವು ಮೊದಲನೆಯ ಸಾಲಿನಲ್ಲಿರುವ ಆಲೋಚನೆಯು ಎರಡನೆಯ ಸಾಲಿನಲ್ಲಿ ಅದಕ್ಕೆ ಸಮನಾರ್ಥವಾಗಿರುವ ಶಬ್ದಗಳನ್ನು ನೋಡುತ್ತೇವೆ:

> **ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ**
> **ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗ**
> **ಬೇಕೆಂದಿರುವವನು ನಿಮ್ಮ ಆಳಾಗಿರಬೇಕು.**

"ದೊಡ್ಡವನು" ಎನ್ನುವ ಶಬ್ದ ಮೊದಲಿನ ಸಾಲಿನಲ್ಲಿರುವದು ಎರಡನೆಯ ಸಾಲಿನಲ್ಲಿರುವ "ಮೊದಲ" ಶಬ್ದ ಸಮಾನಾರ್ಥವಾಗಿದೆ. ಅದಕ್ಕೆ ಹೋಲಿಕೆಯಾಗಿ, "ಸೇವಕ" ಎನ್ನುವ ಶಬ್ದವು "ಆಳು" ಎನ್ನುವ ಶಬ್ದಕ್ಕೆ ಸಮನಾರ್ಥಕೊಡುತ್ತದೆ. ಆದಾಗ್ಯೂ ಈ ವಚನದಲ್ಲಿ ಅಂದಾಜಿನ ಮೇಲೆ ಸಮನಾರ್ಥವೆಂಬಂತೆ ಉಪಯೋಗಿಸಲಾಗಿದೆ, ಗ್ರೀಕ್ ಶಬ್ದವು ಬೇರೆ ಬೇರೆ ಅರ್ಥವನ್ನು ಒಳಗೊಂಡಿರುತ್ತದೆ. "ಸೇವಕ" (*diakonos*) ಎನ್ನುವದರ ಶಬ್ದ ತನ್ನ ಯಜಮಾನನ ಮನೆಯಲ್ಲಿ ಕೆಲಸ ಮಾಡಲು ತೆಗೆದುಕೊಂಡಿರುವ ಸೇವಕನೆಂದು ಅರ್ಥಕೊಡುತ್ತದೆ, ಹಾಗೆಯೇ "ಆಳು" (*doulos*) ಎನ್ನುವ ಪದವು ಕೆಲಸ ಮಾಡಲು ಒತ್ತಾಯ ಮಾಡುವದು ಎಂದು ಅರ್ಥಕೊಡುತ್ತದೆ.[27]

ಕ್ರಿಸ್ತನ ರಾಜ್ಯದಲ್ಲಿ ದೊಡ್ಡ ಸ್ಥಾನವು ದೊಡ್ಡ ಸ್ಥಾನ ಮತ್ತು ಬಲದಿಂದ ಬರುವದಿಲ್ಲ; ಅದು ಇತರರಿಗೆ ತಗ್ಗಿಸಿಕೊಂಡು ಸೇವೆ ಮಾಡುವದರ ಮುಖಾಂತರ ಬರುತ್ತದೆ (ನೋಡಿರಿ 10:39; 16:24, 25). ಈ ಸೂತ್ರವನ್ನು ಅರ್ಥಮಾಡಿಕೊಳ್ಳಲು ಮತ್ತು ಅದನ್ನು ಕೈಗೊಂಡು ನಡೆಯಲು ಯೇಸುವಿನ ಹಿಂಬಾಲಕರಿಗೆ ಕಷ್ಟಕರವಾಗಿತ್ತು ಇದು ಮಾನವನ ಸ್ವಾಭಾವಕ್ಕೆ ವಿರುದ್ಧವಾಗಿತ್ತು ಎಂದು ಕಾಣಿಸುತ್ತದೆ. ಹೆಚ್ಚಿನ ಸಮಯದಲ್ಲಿ, ಏನೇ ಆದರೂ ಸಹ, ಅವರು ಈ ಸೇವೆಯ ಆಲೋಚನೆಯನ್ನು ಹಿಡಿದು ಕೊಂಡರು. ಹೊಸ ಒಡಂಬಡಿಕೆಯ ಅನೇಕ ಪುಸ್ತಕಗಳ ಬರಹಗಾರರು ಕ್ರಿಸ್ತನ ಆಳುಗಳು ಎಂದು ಹೇಳುತ್ತಾ ಬರೆಯಲು ಪ್ರಾರಂಭಿಸಿದ್ದಾರೆ (ರೋಮಾಪುರ 1:1; ಫಿಲಿಪ್ಪಿ 1:1; ಯಾಕೋಬ 1:1; 2 ಪೇತ್ರ 1:1; ಯೂದ 1; ಪ್ರಕಟಣೆ 1:1).

**ವಚನ 28.** ಯೇಸು ತನ್ನ ಸ್ವಂತ ಜೀವಿತವನ್ನೇ ತನ್ನ ಶಿಷ್ಯರು ಅನುಕರಿಸುವಂತೆ ಮಾದರಿಯಾಗಿ ಕೊಡುತ್ತಿದ್ದಾನೆ: **ಸೇವೆ ಮಾಡುವದಕ್ಕೂ ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು ಎಂದು ಹೇಳಿದನು.** ಆತನು ಈ ಲೋಕಕ್ಕೆ ಕೊಡುವದಕ್ಕಾಗಿ ಬಂದನು, ತೆಗೆದುಕೊಳ್ಳಲು ಬರಲಿಲ್ಲ. ಆತನು ಆಳಾಗಿ ಕೆಲಸ ಮಾಡಿದ್ದಕ್ಕೆ ಉದಾಹರಣೆಯಾದನು ಆತನು ಅನಕ್ಷರಸ್ತರಿಗೆ ಬೋಧಿಸಿದನು, ಹಸಿವೆ ಯಾದವರಿಗೆ ಊಟಕೊಟ್ಟನು, ಮತ್ತು ಸತ್ತವರಿಗೆ ಜೀವಕೊಟ್ಟನು ಇವೆಲ್ಲವುಗಳಲ್ಲಿ ಆತನು ಉದಾಹರಣೆಯಾದನು. ಅಂತಿಮವಾಗಿ, ಆತನು ತನ್ನ ಸ್ವಂತ ಜೀವಿತವನ್ನು ಶಿಲುಬೆ ಮೇಲೆ ಪಾಪದಿಂದ ಕೂಡಿದ ಇಡೀ ಮಾನವ ಕುಲವನ್ನು ದೇವರೊಂದಿಗೆ ಪುನಃ ಸಂಧಾನ ಮಾಡುವದಕ್ಕಾಗಿ ಕೊಟ್ಟನು. ಆದಾಗ್ಯೂ ಯೇಸು ದೇವರಾಗಿದ್ದಾನೆ, ಆತನ ಆಳುವ ನೀತಿ ಪದ್ಧತಿಯು ಸಂಪೂರ್ಣವಾಗಿ ಅನ್ಯರ ಆಳ್ವಿಕೆಯ ಪದ್ಧತಿಗೂ ಅವರ ನಡತೆಗೂ ವಿರುದ್ಧವಾಗಿದೆ (20:25; ಲೂಕ 22:24-27).

"ತನ್ನ ಜೀವಿತವನ್ನು ಅನೇಕರಿಗೋಸ್ಕರ ಬಿಡುಗಡೆಗಾಗಿ ಕೊಟ್ಟನು" ಎನ್ನುವ ಭಾಗವು ಯೆಶಾಯ ಪ್ರವಾದನೆಯ ಆಧಾರದ ಮೇಲೆ ಸಂಕಟಕ್ಕೆ ಒಳಗಾದ ಸೇವಕ ಎನ್ನುವದು ಇಲ್ಲಿ ಕಾಣಿಸುತ್ತದೆ: "ತನ್ನ ಪ್ರಾಣವನ್ನು [*psuchē*] ದಾರೆಯ ಅದು ಮರಣ ಹೊಂದಿದನು ... ಮತ್ತು ಆತನು ಬಹು ಜನರ [*pollōn*] ಪಾಪವನ್ನು ಹೊತ್ತನು ಮತ್ತು ಅವರನ್ನು ದ್ರೋಹದಿಂದ ಬಿಡಿಸಿದನು" (ಯೆಶಾಯ 53:12; LXX). ಮತ್ತಾಯನು ಸಹ ಈ ಭಾಗವನ್ನು "ಅನೇಕರ ಪರವಾಗಿ ಅವರ ಸ್ಥಾನದಲ್ಲಿ [*anti*] ಆತನು ತನ್ನ ಪ್ರಾಣವನ್ನು ಕೊಟ್ಟನು." ಈ ಭಾಷೆಯು ಕ್ರಿಸ್ತನ ತ್ಯಾಗಮಯ ಜೀವಿತದ ಸ್ವರೂಪದ ಕುರಿತಾಗಿ ಹೊಸ ಒಡಂಬಡಿಕೆಯ ಬೋಧನೆಗೆ ಸಹಾಯ ಮಾಡುತ್ತದೆ (ನೋಡಿರಿ ಯೋಹಾನ 10:11; ರೋಮಾಪುರ 4:25; 5:6-11; 2 ಕೊರಿಂಥ 5:21; ಗಲಾತ್ಯ 3:13, 14; ತೀತನು 2:14; 1 ಪೇತ್ರ 1:18, 19; 2:24; 3:18).

ಬಿಡುಗಡೆಗಾಗಿ "ತನ್ನ ಪ್ರಾಣ ಕೊಡುವದು" (*lutron*), ಎಂದು ಅನುವಾದ ಮಾಡಿರುವದು, ಕೇವಲ ಹೊಸ ಒಡಂಬಡಿಕೆಯಲ್ಲಿ ತೆಗೆದುಕೊಳ್ಳಲಾಗಿದೆ ಮತ್ತು ಅದಕ್ಕೆ ಸಮನಾರ್ಥಕೊಡುವ ಭಾಗವನ್ನು ಮಾರ್ಕ 10:45ರಲ್ಲಿ ನೋಡುತ್ತೇವೆ. ಇದನ್ನು ಗ್ರೀಕ್ ಸಾಹಿತ್ಯದಲ್ಲಿ ಗುಲಾಮರನ್ನು ಬಿಡುವದಕ್ಕೆ ಅಥವಾ ಯುದ್ಧದ ಕೈದಿಗಳನ್ನು ಕೊಂಡುಕೊಳ್ಳುವದನ್ನು ಸೂಚಿಸಲು ಉಪ ಯೋಗಿಸಲಾಗಿದೆ. ಅದಕ್ಕೆ ಸರಿಸಮವಾಗಿ, ಯೇಸು ಪಾಪದ ಬಂಧನದಲ್ಲಿರುವ ಜನರನ್ನು ಬಿಡಿಸಲು ಸತ್ತನು (ರೋಮಾಪುರ 6:15-23). ಇದಕ್ಕೆ ಸಂಬಂಧದ ಕ್ರಿಯಾಪದವು (*lutroō*), 1 ಪೇತ್ರ 1:18ರಲ್ಲಿ ಕಾಣಿಸುತ್ತದೆ, ವಿಮೋಚನೆಗಾಗಿ ಕೊಟ್ಟಿರುವ ಬೆಲೆ ಆ ಕ್ರಿಸ್ತನ ಅಮೂಲ್ಯ ರಕ್ತವಾಗಿದೆ ಎಂದು ಅದು ಹೇಳುತ್ತದೆ. ಈ ಕ್ರಿಯಾಪದವು ತೀತನು 2:14ರಲ್ಲಿಯೂ ಸಹ ಕಾಣಿಸುತ್ತದೆ, ನಮ್ಮನ್ನು ಪಾಪದಿಂದ ಬಿಡಿಸಲು ಕ್ರಿಸ್ತನು ತಾನೆ ತನ್ನ ಪ್ರಾಣವನ್ನು ಕೊಟ್ಟನು ಎಂದು ಹೇಳುತ್ತದೆ. (ಇದಕ್ಕೆ ಸಂಬಂಧಿಸಿದ ಇತರೆ ಶಬ್ದಗಳಿಗಾಗಿ ನೋಡಿರಿ, ರೋಮಾಪುರ 3:24; ಎಫೆಸ 1:7; 1 ತಿಮೊಥೆ 2:6; ಇಬ್ರಿಯ 9:12.)

"ವಿಮೋಚನೆಗಾಗಿ ಬೆಲೆ" ಎನ್ನುವ ಆಲೋಚನೆ ಒಂದು ಪ್ರಶ್ನೆಯನ್ನು ಎಬ್ಬಿಸುತ್ತದೆ: "ಈ ಬೆಲೆ ಯಾರಿಗೆ ಕೊಡಲ್ಪಟ್ಟಿತು?" ಅದು ಸೈತಾನನಿಗೋ? ಅದು ದೇವರಿಗೋ? ಸರಿಯಾದ ಉತ್ತರ ದೇವರೇ ಆಗಿರಲೇಬೇಕು: F. Buchsel ರವರು ಈ ಅಂಶದೊಂದಿಗೆ ಒತ್ತಾಯದಿಂದ ವಾದ ಮಾಡಿದ್ದಾನೆ:

> ... ದೇವರು ವಿಮೋಚನೆಯ ಬೆಲೆ ತೆಗೆದುಕೊಳ್ಳುವ ವ್ಯಕ್ತಿಯಾಗಿದ್ದನು. ಯೇಸು ಆತನು ಸಾಯುವಾಗ ದೇವರಿಗೆ ಸೇವೆ ಮಾಡಿದನು, ಮತ್ತು ದೇವರು ಕನಿಕರವಿಲ್ಲದೆ ತನ್ನ ಮಗನಿಂದ ಸಂಕಟವನ್ನು ಹೊಂದಲು ಅಪ್ಪಣೆ ಮಾಡುತ್ತಾನೆ. ದೇವರು ಅವನನ್ನು ಚುಚ್ಚುತ್ತಾನೆ. ಸೈತಾನನು ಆ ಬೆಲೆಯನ್ನು ಸ್ವೀಕರಿಸುವ ಎಲ್ಲಾ

ಸಾಧ್ಯತೆಗಳನ್ನು ತೆಗೆದುಹಾಕಲಾಗಿದೆ. ಮಾರ್ಕ ಮತ್ತು ಮತ್ತಾಯನು ಬರೆದಿರುವ ಸಂಕಟ ಶ್ರಮೆಯ ಕಥೆಯಲ್ಲಿ ಸೈತಾನನ ಪಾತ್ರವನ್ನು ತೋರಿಸಿರುವದಿಲ್ಲ. ಯೇಸು ಮರಣ ಹೊಂದಬೇಕೆನ್ನುವದು ಸೈತಾನನ ಇಷ್ಟವಾಗಿತ್ತು ಅದರಿಂದ ಅವನು ಅದನ್ನು ತಪ್ಪಿಸಲು ಸ್ವಲ್ಪ ಪ್ರಯತ್ನ ಮಾಡಿದನು, ಮಾರ್ಕ 8:33; ಮತ್ತಾಯ 16:23. ಯೇಸು ಬಲವುಳ್ಳವನು ಎನ್ನುವದು ದೇವರ ಕಲ್ಪನೆ ಅಲ್ಲಿ ಯಾವುದೇ ಸಮವ್ಯಾಂಪಕತೆ ಇರುವದಿಲ್ಲ ಅನೇಕರು ಸೈತಾನನ ಬಂಧನದಿಂದ ತಪ್ಪಿಸಿಕೊಳ್ಳಬೇಕಾಗಿದೆ. ಈ ಕಲ್ಪನೆಯು ದೇವರಿಗೆ ಋಣಬದ್ಧರಾಗಿ ಬಿಡುಗಡೆಯಾಗಿ ಸ್ವತಂತ್ರರಾಗಿರಲು ಅಪ್ಪಣೆ ಕೊಡುತ್ತದೆ.[28]

"ಅನೇಕರು" ಎನ್ನುವ ಶಬ್ದವು ಯೇಸು ಕೇವಲ ಕೆಲವು ಜನರಿಗೆ ಆತನು ಸತ್ತವನು ಎಂದು ನಾವು ಆಲೋಚಿಸಬಾರದು ("ನಿಯಮಿತ ಪ್ರಾಯಶ್ಚಿತ"). ಇಲ್ಲಿ ಇದನ್ನು ಇಬ್ರಿಯ ಭಾಷೆಯಲ್ಲಿ ಹೇಳಿರುವ ಅರ್ಥ "ಎಲ್ಲರೂ" ಎನ್ನುವದನ್ನು ಉಪಯೋಗಿಸಲಾಗಿದೆ (ನೋಡಿರಿ 26:28; ಇಬ್ರಿಯ 9:28).[29] ಹೊಸ ಒಡಂಬಡಿಕೆಯಲ್ಲಿ ಇತರೆ ಭಾಗಗಳು ಯೇಸುವಿನ ತ್ಯಾಗದ ಸಾರ್ವತ್ರಿಕವಾದ ಗುಣದ ಕುರಿತು ಯಾವುದೇ ಸಂಶಯವಿಲ್ಲದೆ ಆ ಭಾಗಗಳು ಬೋಧಿಸುತ್ತವೆ (ಯೋಹಾನ 1:29; 3:16; 2 ಕೊರಿಂಥ 5:14, 15; 1 ತಿಮೋಥೆ 2:3-6; ತೀತ 2:11; 1 ಯೋಹಾನ 2:1, 2). ನಿರ್ದಿಷ್ಟವಾಗಿ, 1 ತಿಮೊಥೆ 2:6ರಲ್ಲಿ ಯೇಸು "ತನ್ನನ್ನು ತಾನೇ ವಿಮೋಚನೆಗೆ ಬೆಲೆ ತೆತ್ತನು [*antilutron*] ಎಂದು ಪ್ರತಿಪಾದಿಸಲಾಗಿದೆ." ಯೇಸು ಎಲ್ಲಾ ಜನರಿಗಾಗಿ ಸತ್ತನು, ಆದಾಗ್ಯೂ ಆತನ ತ್ಯಾಗದ ಲಾಭವನ್ನು ಪ್ರತಿಯೊಬ್ಬರೂ ಸ್ವೀಕರಿಸುವದಿಲ್ಲ.

ಸಾರಾಂಶದಲ್ಲಿ, ವಚನ 28 ಕ್ರಿಸ್ತನ ಮರಣದ ಕುರಿತು ಮುಖ್ಯವಾದ ಮೂರು ಸತ್ಯಗಳನ್ನು ಬೋಧಿಸುತ್ತದೆ. (1) ಕ್ರಿಸ್ತನು ಉಚಿತವಾಗಿ ತನ್ನಷ್ಟಕ್ಕೆ ತಾನೇ ಅದನ್ನು ಕೊಟ್ಟನು. (2) ಯಾರು ದೇವರಿಗೆ ವಿಧೆಯರಾಗಬೇಕಾಗಿತ್ತೋ ಅವರು ವಿಧೇಯರಾಗಲಿಲ್ಲ ಅವರ ಪರವಾಗಿ ಆತನು ಒಬ್ಬ ಸಭೆಗಾಗಿ ಸಂಕಟಪಡುವ ಸೇವಕನಂತೆ ಮಾಡಿದನು. (3) ಇದು ಸಾರ್ವತ್ರಿಕವಾದ ಕಾರ್ಯ, ಇಡಿ ಲೋಕಕ್ಕೋಸ್ಕರ ಮಾಡಿದನು.[30]

## ಇಬ್ಬರು ಕುರುಡರಿಗೆ ದೃಷ್ಟಿ ಕೊಟ್ಟದ್ದು (20:29-34)

**29ಅವರು ಯೆರಿಕೋವಿನಿಂದ ಹೊರಟುಹೋಗುತ್ತಿರುವಾಗ ಜನರ ದೊಡ್ಡ ಗುಂಪು ಆತನ ಹಿಂದೆ ಹೋಯಿತು. 30ಆಗ ದಾರಿಯ ಮಗ್ಗುಲಲ್ಲಿ ಕೂತಿದ್ದ ಇಬ್ಬರು ಕುರುಡರು, ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು ಕೇಳಿ - ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗಿಕೊಂಡರು. 31ಆ ಗುಂಪಿನವರು - ಸುಮ್ಮನಿರಿ ಎಂದು ಅವರನ್ನು ಗದರಿಸಲು ಅವರು - ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಹೆಚ್ಚಾಗಿ ಕೂಗಿಕೊಂಡರು. 32ಆಗ ಯೇಸು ನಿಂತು ಅವರನ್ನು ಕರೆದು - ನಾನು ನಿಮಗೆ ಏನು ಮಾಡಬೇಕೆಂದು ಕೋರುತ್ತೀರಿ ಎಂದು ಕೇಳಲು ಅವರು - 33ನಮ್ಮ ಕಣ್ಣುಗಳು ತೆರೆಯಲ್ಪಡಬೇಕು, ಸ್ವಾಮೀ ಅಂದರು. 34ಆಗ ಯೇಸು ಕನಿಕರಪಟ್ಟು ಅವರ ಕಣ್ಣುಗಳನ್ನು ಮುಟ್ಟಿದನು. ಕೂಡಲೆ ಅವರಿಗೆ ಕಣ್ಣು ಬಂದವು, ಅವರು ಆತನ ಹಿಂದೆ ಹೋದರು.**

ಸೇವೆಯ ಕುರಿತಾಗಿ ಬೋಧಿಸಿದ ನಂತರ (20:25-28), ಯೇಸು ಈ ಇಬ್ಬರು ಕುರುಡರಿಗೆ ಗುಣಪಡಿಸುವದರ ಮುಖಾಂತರ ಅದನ್ನು ತೋರಿಸಿಕೊಟ್ಟನು. ನಿಂತುಕೊಳ್ಳಲು ಸಮಯ ತೆಗೆದುಕೊಂಡನು ಮತ್ತು ಅಗತ್ಯದಲ್ಲಿರುವವರಿಗೆ ಕರುಣೆಯನ್ನು ತೋರಿದನು.

**ವಚನ 29.** ಯೇಸು ಮತ್ತು ಆತನು ಶಿಷ್ಯರು ಯೆರಿಕೋವಿನಿಂದ ಹೊರಟು ಹೋಗುವ ಸಮಯದಲ್ಲಿ ಈ ಇಬ್ಬರು ಕುರುಡರನ್ನು ಗುಣಪಡಿಸಿದನು. ಈ ಮೊದಲು ಹೇಳಿರುವ

ವಾಕ್ಯಗಳ ಪ್ರಕಾರ ಆತನು ಯುದಾಯ ಪ್ರಾಂತದಲ್ಲಿ "ಯೋರ್ದನ್ ಹೊಳೆಯ ಆಚೆ" ಇದ್ದನು (19:1) ಎಂದು ತಿಳಿಸುತ್ತದೆ, ಮತ್ತು ಆತನು ಯೆರೂಸಲೇಮಿಗೆ ಹೋಗುವವನಿದ್ದನು ಎಂದು ಹೇಳುತ್ತದೆ (20:17). ಈ ಸಮಯಕ್ಕೆ ಆತನು ಯುದಾಯವನ್ನು ಬಿಟ್ಟು, ಯೂದಾಯದಲ್ಲಿರುವ ಯೋರ್ದಾನ್ ನದಿಯನ್ನು ದಾಟಿದ್ದನ್ನು ಯೋರ್ದಾನಿನ ಪಶ್ಚಿಮ ಭಾಗದಲ್ಲಿ ಸುಮಾರು ಐದು ಮೈಲುಗಳ ದೂರದಲ್ಲಿ ಯೆರಿಕೋ ಇದೆ. ಕರ್ತನು ಯೆರೂಸಲೇಮಿಗೆ ಹೋಗುವ ಮಾರ್ಗ ದಿಣ್ಣೆಯಿಂದ ಕೂಡಿದ ಪ್ರಯಾಸದ ಪ್ರಯಾಣಕ್ಕಾಗಿ ಸಿದ್ಧಮಾಡುತ್ತಿದ್ದನು; ಆ ಪ್ರಪಾತದಲ್ಲಿ ಒಂದೊಂದು ಶಿಖರಗಳು ಸುಮಾರು 2,600 ಅಡಿ ಎತ್ತರದಲ್ಲಿ ವಾಲಿದ್ದವು. ಯೆರೂಸಲೇಮ ಯೆರಿಕೋವಿನ ದಕ್ಷಿಣ ಭಾಗದಲ್ಲಿ ಸುಮಾರು ಹದಿನೈದು ಮೈಲುಗಳ ದೂರದಲ್ಲಿ ಇದೆ. Michael J. Wilkins ರವರು ಹೇಳುವಂತೆ ಕಾಲು ನಡಿಗೆಯಲ್ಲಿ ಹೋಗುವುದಾದರೆ ಸುಮಾರು ಆರರಿಂದ ಎಂಟುಗಂಟೆಗಳ ಕಾಲ ಪ್ರಯಾಣವಾಗುವದೆಂದು ಅಂದಾಜು ಮಾಡಲಾಗಿದೆ, ಅದರಿಂದ ಯೇಸು ಮತ್ತು ಆತನ ಶಿಷ್ಯರು ತಾವು ಮುಟ್ಟಬೇಕಾದ ಸ್ಥಳಕ್ಕೆ ರಾತ್ರಿ ಆಗುವದರೊಳಗೆ ಮುಟ್ಟಲು ಆತುರ ಪಡುತ್ತಿದ್ದರು.[31]

ಯೆರಿಕೋವಿನಿಂದ ಯೆರೂಸಲೇಮಿಗೆ ಪ್ರಯಾಣ ಮಾಡುವ ಈ ರಸ್ತೆಮಾರ್ಗದಲ್ಲಿ ಭಯಾನಕವಾದ ಕಳ್ಳರಿಂದ ಕಳ್ಳತನ ಮಾಡಲಾಗುತ್ತಿತ್ತು (ನೋಡಿರಿ ಲೂಕ 10:30). ಡಕಾಯಿತರು ಕಣಿವೆಗಳಲ್ಲಿ ಅಡಗಿ ಕುಳಿತುಕೊಳ್ಳುತ್ತಿದ್ದರು ಅಥವಾ ಬಂಡೆಗಳ ಹಿಂದೆ ಕುಳಿತುಕೊಂಡು ರಕ್ಷಣೆ ರಹಿತ ಪ್ರಯಾಣಿಕರಿಗೆ ಸಲಹೆ ಮಾಡುತ್ತಿದ್ದರು. ಒಂದು ದೊಡ್ಡ ಗುಂಪಾಗಿ ಪ್ರಯಾಣ ಮಾಡುವವರಿಗೆ ಸ್ವಲ್ಪ ಕಡಿಮೆ ಭಯ ಇರುತ್ತಿತ್ತು.

ಈ ಒಂದೇ ಅಂಶಗಳನ್ನು ಒಳಗೊಂಡ ಸುವಾರ್ತೆಗಳಲ್ಲಿ ಈ ಘಟನೆಯನ್ನು ಹೋಲಿಸಿ ನೋಡುವಾಗ, ಯೇಸು ಮತ್ತು ಆತನ ಶಿಷ್ಯರು ಈ ಸ್ವಸ್ಥತೆ ನಡೆಯುವಾಗ ಅವರು ಇರುವ ಸ್ಥಳದ ಕುರಿತು ಒಂದು ಪ್ರಶ್ನೆ ಏಳುತ್ತದೆ. ಮತ್ತಾಯನು, ಈ ಕುರುಡರನ್ನು ಸಂಧಿಸುವ ಮೊದಲು "ಅವರು ಯೆರಿಕೋವನ್ನು ಬಿಡುತ್ತಿದ್ದರು" ಎಂದು ಹೇಳುತ್ತಾನೆ, ಲೂಕನು ಹೇಳುವದೇನೆಂದರೆ "ಯೇಸು ಯೆರಿಕೋವಿನ ಸಮೀಪಕ್ಕೆ ಬರುತ್ತಿದ್ದನು" (18:35) ಎಂದು ಹೇಳುತ್ತಾನೆ. ಸಹಜವಾಗಿ ಹೆಚ್ಚು ಕಡಿಮೆ ಅಲ್ಲಿ ಎರಡು ಯೆರಿಕೋ ಎನ್ನುವ ಊರುಗಳಿದ್ದವು ಎಂದು ಊಹಿಸಿಕೊಳ್ಳಲಾಗಿದೆ.

ಯೆಹೋಶುವನ ಕಾಲದಲ್ಲಿ ಹಳೆ ಒಡಂಬಡಿಕೆಯ ಪಟ್ಟಣ ನಾಶಮಾಡಲ್ಪಟ್ಟಿತು (ಯೆಹೂಶುವ 6) ಆದರೆ ಅದನ್ನು ಪುನಃ ಕಟ್ಟಲ್ಪಟ್ಟಿತು (1 ಅರಸುಗಳು 16:34). ಕ್ರಿಸ್ತನ ಕಾಲದಲ್ಲಿ ಇನ್ನೂ ಅದು ವಾಸಿಸಲು ಯೋಗ್ಯವಾಗಿತ್ತು.

ಹೊಸ ಪಟ್ಟಣವು ಅರಮನೆಯ ಸುತ್ತಲಿನ ಪ್ರದೇಶದಲ್ಲಿ Hasmoneans ದಿಂದ ಹಳೆ ಮತ್ತು ಹೊಸ ಒಡಂಬಡಿಕೆಯ ಮಧ್ಯಾಂತರ ಕಾಲದಲ್ಲಿ ಕಟ್ಟಲ್ಪಟ್ಟಿತು. ಇದು ಹಳೆ ಪಟ್ಟಣದಿಂದ ಸುಮಾರು ಒಂದು ಮೈಲು ದೂರವಿತ್ತು. ನಂತರ, ಅದನ್ನು ಮಹಾರಾಜನಾದ ಹೆರೋದನು Hasmonean ಅರಮನೆಯ ಪಕ್ಕದಲ್ಲಿಯೇ ಮೂರು ಅರಮನೆಗಳನ್ನು ವಿಸ್ತರಿಸಿದನು. ಅವನು ಚಳಿಗಾಲವನ್ನು ಅಲ್ಲಿ ಕಳೆಯಲು ಇಷ್ಟಪಡುತ್ತಿದ್ದನು ಯಾಕೆಂದರೆ ಕಡಿಮೆ ಎತ್ತರದಿಂದ ಬಿಸಿವಾತವರಮ ಬೀಸುತ್ತಿತ್ತು.[32] ಈ ಅರಮನೆಗಳು ಸತ್ಕಾರ ಕೂಟದ ಕೋಣೆಗಳನ್ನು, ರೋಮನ್ನರ ಸ್ನಾನ ಗೃಹ, ಮುಳುಗುವ ತೋಟಗಳು, ಈಜು ಕೊಳವೆ, ಮತ್ತು ದೊಡ್ಡದಾದ ನ್ಯಾಯಲಯದ ಅಂಗಳಗಳು ಹೊಂದಿದ್ದವು, ಹೆರೋದನು ಸಹ ಚಿತ್ರಮಂದಿರವನ್ನು, ಕುದುರೆ ಸವಾರಿಗೆ ಮಾರ್ಗವನ್ನು ಮತ್ತು ರಥಗಳನ್ನು ಕಟ್ಟಿಸಿದನು, ಮತ್ತು ವ್ಯಾಯಾಮ ಶಾಲೆಗಳನ್ನು ತೆರೆದನು. ಹೊಸ ಪಟ್ಟಣವು ಆಗಾಗಲೇ ಆನಂದದಾಯಕ ಸ್ಥಳವನ್ನು ಹೊಂದಿದೆ, ತಾಳೆ ಮರಗಳು ಮತ್ತು ಗುಲಾಬಿ ತೋಟವು ಅಲ್ಲಿದ್ದವು. ಮಾರ್ಕ ಆಂಥೋನಿ ಅವರು ಇದನ್ನು ಐಗುಪ್ತದ ರಾಣಿ ಕ್ಲೊಪಾತ್ರಗೆ ತನ್ನ ಪ್ರೀತಿಗಾಗಿ ಅವಳಿಗೆ ಕೊಟ್ಟು ಬಿಟ್ಟನು.[33]

ಸಹಜವಾಗಿ, ಯೇಸು ಹಳೆ ಯೆರಿಕೋವನ್ನು ಬಿಟ್ಟು ಹೊಸ ಯೆರಿಕೋವಿಗೆ ಪ್ರವೇಶ ಮಾಡುವಾಗ ಆತನು ಈ ಇಬ್ಬರು ಕುರುಡರನ್ನು ಸಂಧಿಸಿದನು. ಕರ್ತನು ನಡೆದುಕೊಂಡು ಹೋಗುವಾಗ ಆತನೊಂದಿಗೆ ದೊಡ್ಡ ಗುಂಪು ಆತನೊಂದಿಗೆ ನಡೆದುಕೊಂಡು ಹೋಗುತ್ತಿದ್ದರು: ಪಸ್ಕವು ಹತ್ತಿರವಾಗಿರುವ ಸಮಯದಲ್ಲಿ, ಯೆರೂಸಲೇಮಿಗೆ ಹೋಗುವಾಗ ಅನೇಕ ಪವಿತ್ರ ಸ್ಥಳಗಳನ್ನು ಮಾಡಲಾಗಿತ್ತು. ಹೊಸ ಯೆರಿಕೋವಿಗೆ ಸಂಧಿಸುವ ಮುಖ್ಯವಾದ ರಸ್ತೆ ಈ ಇಬ್ಬರು ಕುರುಡರಿಗೆ ಭಿಕ್ಷೆ ಬೇಡುವ ಸ್ಥಳವಾಗಿತ್ತು (ನೋಡಿರಿ ಲೂಕ 18:35). ಹಬ್ಬಕ್ಕಾಗಿ ಹೋಗುತ್ತಿರುವ ಅನೇಕ ಯಾತ್ರಿಗಳು ಸಂತೋಷದ ಮನೋಭಾವದಲ್ಲಿದ್ದರು, ಮತ್ತು ಅವರ ಪ್ರಯಾಣಕ್ಕಾಗಿ ಸಾಕಷ್ಟು ಹಣವನ್ನು ತೆಗೆದುಕೊಂಡು ಬಂದವರಾಗಿದ್ದರು.

**ವಚನ 30.** ಮತ್ತಾಯನ ಪ್ರಕಾರ ರಸ್ತೆಯ ಪಕ್ಕದಲ್ಲಿ ಇಬ್ಬರು ಕುರುಡರು ಕೂತಿದ್ದರು ಎಂದು ಹೇಳಲಾಗಿದೆ. ಲೂಕ 18:35ರಲ್ಲಿ, ಮತ್ತು ಮಾರ್ಕ 10:46ರಲ್ಲಿ ಕೇವಲ ಒಬ್ಬನೆ ವ್ಯಕ್ತಿ ಕುರುಡನು ಕುಳಿತುಕೊಂಡಿದ್ದನು "ಆತನು ತಿಮಾಯನ ಮಗನಾದ ಬಾರ್ತಿಮಾಯನು" ಎಂದು ಬರೆಯಲಾಗಿದೆ. ವಾಕ್ಯದಲ್ಲಿ ಈ ವಿಷಯದ ಕುರಿತು ವಾಕ್ಯದಲ್ಲಿರುವ ವಿರೋ ದೋಕ್ತಿಯನ್ನು ಕೆಲವರು ಭಿನ್ನವಾದ ರೀತಿಯಲ್ಲಿ ಅವಲೋಕಿಸುವರು. ಏನೇ ಆದರೂ, ಇಲ್ಲಿ ವಾಸ್ತವಿಕವಾದ ಘರ್ಷಣೆ ಇಲ್ಲ, ಮಾರ್ಕನಾಗಲಿ ಇಲ್ಲವೆ ಲೂಕನಾಗಲಿ ಅವರು ಹೇಳಿದ್ದೇ ನೆಂದರೆ ಯೇಸು ಕೇವಲ ಒಬ್ಬನೆ ಕುರುಡನಿಗೆ ದೃಷ್ಟಿಕೊಟ್ಟನು ಎಂದು ಹೇಳುತ್ತಾರೆ. ಈ ರೀತಿಯಾಗಿ ಹೇಳುವದು ಕೇವಲ ಒಬ್ಬ ವ್ಯಕ್ತಿ ಎಂದು ಒತ್ತಿ ಹೇಳಲಾಗಿದೆ, ಅಲ್ಲಿ ಒಬ್ಬನನ್ನು ಮುಖ್ಯವಿಷಯವಾಗಿ ತೆಗೆದುಕೊಂಡರೆ ಇನ್ನೊಬ್ಬನು ಅಲ್ಲಿ ಅವನ ಜೊತೆಯಲ್ಲಿದ್ದನು ಎಂದು ಹೇಳಲಾಗುತ್ತದೆ. ಅಲ್ಲಿ ಒಬ್ಬನು ಆತನ ಹೆಸರು ಬಾರ್ತಿಮಾಯನು ಎಂದು ಹೇಳಿರುವಾಗ ಅವನ ಸಮಸ್ಯೆ ಇಲ್ಲ. ಈ ಉಪಕಥೆಯಲ್ಲಿ ಅವನು ಇಬ್ಬರು ಕುರುಡರು ಎಂದು ಸ್ಪಷ್ಟವಾಗಿ ಹೇಳಿರ ಬಹುದು.[34] ನಮ್ಮಲ್ಲಿ ಎಲ್ಲಾ ವಿವರಣೆಗಳು ಇರುವುದಾದರೆ, ಒಂದೇ ಅಂಶಗಳನ್ನೊಳಗೊಂಡ ಈ ಮೂರು ಸುವಾರ್ತೆಗಳ ಮಧ್ಯದಲ್ಲಿ ಇರುವ ವ್ಯತ್ಯಾಸಗಳ ಅಂಶಗಳನ್ನು ನಾವು ಕಾಣಬಹುದಾಗಿದೆ.

ಇದನ್ನು ನಾವು ಗಮನಿಸಬೇಕು, ಇಂಥಹ ವಿಷಯಗಳಲ್ಲಿ, ಮತ್ತಾಯನು ಹೆಚ್ಚಿನ ಸಂಪೂರ್ಣ ವಿವರಣೆ ಕೊಟ್ಟಿದ್ದಾನೆ. ಆತನು ದೆವ್ವಗಳನ್ನು ತಿಳಿಸಿದ್ದಾನೆ (ಒಂದು ಇನ್ನೊಂದರ ವಿರುದ್ಧವಾಗಿ) ಮತ್ತು ಕತ್ತೆ ಮತ್ತು ಅದರ ಮರಿ (ಅದು ವಿರುದ್ಧವಾಗಿ ಇದೆ; ನೋಡಿರಿ 8:28; 21:2ರ ಮೇಲಿನ ವ್ಯಾಖ್ಯಾನ). ಇದು ಇಬ್ಬರು ಕುರುಡರು ಸ್ವಸ್ಥಗೊಂಡರು ಎಂದು ಮತ್ತಾಯನು ದಾಖಲಿಸಿರುವದು ಎರಡನೆಯ ಸಾರಿಯಾಗಿದೆ (9:27-31).

ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆ ಎಂದು ಈ ಇಬ್ಬರು ಕುರುಡರು ಕೇಳಿಸಿಕೊಂಡ ತರುವಾಯ, ಅವರು ಕೂಗಿ, ಸ್ವಾಮೀ, ದಾವೀದ ಕುಮಾರನೇ, ದಾವೀದನ ಕುಮಾರನೇ ನಮ್ಮನ್ನು ಕರುಣಿಸು ಎಂದು ಕೂಗಿಕೊಂಡರು ಇದು ಮೆಸ್ಸೀಯನಿಗೆ ಕರೆಯುವಂಥದ್ದಾಗಿತ್ತು (ನೋಡಿರಿ 1:1; 9:27; 15:22). ಕುರುಡರಿಗೆ ಕಣ್ಣು ಬರುವದು ಮೆಸ್ಸೀಯನು ಬರುವದನ್ನು ಸೂಚಿಸುವಂಥದ್ದಾಗಿದೆ (ಯೆಶಾಯ 29:18; 35:5; 42:7; 11:5ರ ಮೇಲಿನ ವ್ಯಾಖ್ಯಾನ ನೋಡಿರಿ).

**ವಚನ 31.** ಈ ಕುರುಡರು ಕೂಗಿದಾಗ ಅದಕ್ಕೆ ಪ್ರತಿಕ್ರಿಯೆ ಅವರು ಸುಮ್ಮನಿರುವಂತೆ ಗದರಿಸಲಾಯಿತು. ಅವರು ಹಿಂದೆ ಅಪೊಸ್ತಲರು ಚಿಕ್ಕಮಕ್ಕಳನ್ನು ಯೇಸುವಿನ ಬಳಿಗೆ ತೆಗೆದು ಕೊಂಡು ಬರುವಾಗ ಯಾವ ರೀತಿಯಲ್ಲಿ ಮಾಡಿದರೋ ಅದೇ ರೀತಿಯಲ್ಲಿ ಈಗಲೂ ಮಾಡಿದರು (19:13). ಸಾಮಾಜದಲ್ಲಿ ಗುರುತಿಸಲ್ಪಡದವರಿಗೂ ಕ್ರಿಸ್ತನು ಸಮಯ ಕೊಡುತ್ತಾನೆ ಎನ್ನುವ ಸಂಗತಿಯನ್ನು ಜನರು ಯೋಚಿಸಲಿಲ್ಲ. ಜನರ ಪ್ರತಿಕ್ರಿಯೆ ಕುರುಡರನ್ನು ಇನ್ನೂ ಹಟಮಾಡುವಂತೆ ಮಾಡಿತು, ಮತ್ತು ಅವರು ಇನ್ನೂ ಜೋರಾಗಿ ಕೂಗಿದರು.

**ವಚನ 32.** ನಿರಾಕರಿಸಲ್ಪಟ್ಟ ಈ ಜನರಿಗೆ ಸಹಾಯ ಮಾಡಲು ಯೇಸು ತನ್ನ ದಾರಿಯಲ್ಲಿ

ಈ ಜನರು ನಿಂತುಕೊಳ್ಳಲು ಬಿಡಲಿಲ್ಲ. ಆತನು ಅದನ್ನು ನೋಡಿ ಮತ್ತು ಏನಾಗುತ್ತಿದೆ ಎಂದು ಕೇಳಿಸಿಕೊಂಡು ಆತನು ಅಲ್ಲಿ ನಿಂತುಕೊಂಡನು ಮತ್ತು ಆ ಕುರುಡರನ್ನು ತನ್ನ ಬಳಿಗೆ ಕರೆತರಲು ಅಪ್ಪಣೆ ಕೊಟ್ಟನು. ತರುವಾಯ ಅವರನ್ನು ದೂಷಿಸಿದವರು ಅವರಿಗೆ ಪ್ರೋತ್ಸಾಹ ಮಾಡುವವರಾಗಿದ್ದರು ಮತ್ತು "ಧೈರ್ಯವಿರಲಿ, ಏಳಿರಿ, ಆತನು ನಿನ್ನನ್ನು ಕರೆಯುತ್ತಿದ್ದಾನೆ" ಅಂದರು (ಮಾರ್ಕ 10:49). ಕರ್ತನು ಆ ಇಬ್ಬರಿಗೆ, "ನಾನು ನಿಮಗೆ ಏನು ಮಾಡಬೇಕೆಂದು ಕೋರುತ್ತೀರಿ?" ಆತನು ಅವರ ಅಗತ್ಯತೆ ತಿಳಿದುಕೊಂಡಿದ್ದನು ಆದರೆ ಅದು ಕೆಲವರ ಬಾಯಿಮಾತಿನದ್ದಾಗಿತ್ತು ಎನ್ನುವ ಸಂಶಯ ಅವರಿಗೆ ಬರಬಾರದು ಎನ್ನುವ ಆಲೋಚನೆ ಆತರದಾಗಿತ್ತು.

**ವಚನಗಳು 33, 34.** ಆ ಕುರುಡರು ಆತನಿಗೆ, "ಕರ್ತನೆ, ನಮ್ಮ ಕಣ್ಣುಗಳು ತೆರೆಯಲ್ಪಡಬೇಕು" ಅಂದರು ಯೇಸು ಅವರ ಮೇಲೆ ಕರುಣೆ ತೋರಿದನು (ನೋಡಿರಿ 9:36; 14:14; 15:32; 18:27) ಮತ್ತು ಅವರ ಕಣ್ಣುಗಳನ್ನು ಮುಟ್ಟಿದನು; ಮತ್ತು ಕೂಡಲೆ ಅವರಿಗೆ ಕಣ್ಣು ಬಂದವು. ಮಾರ್ಕನ ಪ್ರಕಾರ, ಆತನು ಬಾರ್ತಿಮಾಯನಿಗೆ, "ಹೋಗು; ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿ" ಅದೇ ಅಂದನು (ಮಾರ್ಕ 10:52). ಎಲ್ಲಾ ಮೂರು ಸುವಾರ್ತೆಗಳು ಹೇಳುವದೇನೆಂದರೆ ಆ ಮನುಷ್ಯರು (ಅಥವಾ ಮನುಷ್ಯನು) ಕುರುಡನಾಗಿದ್ದವರು ಯೇಸುವನ್ನು ಹಿಂಬಾಲಿಸಿದರು ಎಂದು ಹೇಳುತ್ತವೆ (ಮಾರ್ಕ 10:52; ಲೂಕ 18:43).

## ಪಾಠಗಳು

## ದ್ರಾಕ್ಷೇತೋಟದಲ್ಲಿ ಕೂಲಿ ಆಳುಗಳ ಸಾಮ್ಯ (20:1-16)

ದ್ರಾಕ್ಷೇ ತೋಟದಲ್ಲಿ ಆಳುಗಳ ಸಾಮ್ಯವನ್ನು ಯೇಸು ಹಿಂದಿನ ಕಾಲದ ಇಸ್ರಾಯೇಲಿನ ದಿನ ನಿತ್ಯದ ಜೀವನದ ಸತ್ಯವನ್ನು ಬೋಧಿಸುತ್ತಾ ಯಾವುದೇ ಬಹುಮಾನ ಹೊಂದಿದ್ದರೂ ಅದು ದೇವರ ಕೃಪೆಯಿಂದಲೆ ಕೊಡುವಂಥದ್ದು ಎಂದು ಆತನು ವಿವರಿಸಲು ಈ ಸಾಮ್ಯವನ್ನು ಉಪಯೋಗಿಸಿದ್ದಾನೆ. ಜನರಿಗೆ ಬಹುಮಾನ ಅವರಿಗೆ ಸರಿಹೊಂದುವದನ್ನು ಕೊಡುವದು ದೇವರಿಗೆ ಇರುವ ವಿಶೇಷ ಅಧಿಕಾರವಾಗಿದೆ. ಇಲ್ಲಿ ಹೊಲದ ಯಜಮಾನನು ದೇವರಿಗೆ ಹೋಲಿಕೆಯಾಗಿದ್ದಾನೆ; ಎಲ್ಲಾ ಐದು ಜನಗಳ ಕೂಲಿ ಆಳುಗಳ ಗುಂಪಿನೊಂದಿಗೆ ವ್ಯವಹರಿಸಲು ಆತನಿಗೆ ಚೆನ್ನಾಗಿ ತಿಳಿದಿದೆ, ಆತನು ಪ್ರತಿಯೊಂದು ಗುಂಪಿನೊಂದಿಗೆ ಸ್ಪಷ್ಟವಾಗಿ ವ್ಯವಹರಿಸಲು ಆತನು ನಿಷ್ಪಕ್ಷಪಾತ ವ್ಯಕ್ತಿಯಾಗಿದ್ದಾನೆ. ಅದೇ ರೀತಿಯಾಗಿ, ದೇವರು ನಿರ್ದಿಷ್ಟವಾಗಿ ಆತನು ನಮಗೆ ವಾಗ್ದಾನ ಕೊಟ್ಟಂತೆ ನಮಗೆ ಮಾಡುತ್ತಾನೆ.

ಹೊಲದ ಯಜಮಾನನು ತನ್ನ ಹೊಲದಲ್ಲಿ ಕೆಲಸ ಮಾಡು ಆಳುಗಳನ್ನು ಕೂಲಿಗಾಗಿ ಕರೆದುಕೊಂಡು ಬಂದನು. ಈ ಸಾಮ್ಯವು ಎಲ್ಲಾ ಜನರು ತನ್ನ ರಾಜ್ಯದಲ್ಲಿ, ಸಭೆಯಲ್ಲಿ ಪ್ರವೇಶ ಮಾಡುವದಕ್ಕಾಗಿ ದೇವರು ಕೊಟ್ಟಿರುವ ಆಹ್ವಾನವನ್ನು ಸೂಚಿಸುತ್ತದೆ; ಮತ್ತು ಯಾರು ನಂಬಿಗಸ್ತರಾಗಿದ್ದಾರೋ ಅವರೆಲ್ಲರು ಬಹುಮಾನ ಹೊಂದುವರು. ಮೊದಲಿನ ಗಂಟೆಯಲ್ಲಿ ಕೆಲಸ ಪ್ರಾರಂಭಮಾಡಿದವನು ಹನ್ನೊಂದು ಗಂಟೆಗೆ ಕೆಲಸಕ್ಕೆ ಬಂದವನಿಗಿಂತಲೂ ಹೆಚ್ಚಾಗಿ ಪರಲೋಕದಲ್ಲಿ ಕೃತಜ್ಞತೆಯುಳ್ಳವನಾಗಿರುವನೋ? ಒಬ್ಬರು ಆ ರೀತಿಯಲ್ಲಿ ಯೋಚಿಸಬಹುದು, ಆದರೆ ಬಹುಶಃ ವ್ಯಕ್ತಿಯು ದೇವರ ಕೃಪೆಯನ್ನು ಹೊಗಳುವದಕ್ಕಾಗಿ ದೊಡ್ಡ ಅವಕಾಶವನ್ನು ಕಳೆದುಕೊಳ್ಳುವವನು ಆಗಿದ್ದಾನೆ.

ಹೊಲದ ಯಜಮಾನನು ಕೂಲಿ ಆಳುಗಳನ್ನು ಕೆಲಸ ಮಾಡಲು ತನ್ನ ದ್ರಾಕ್ಷೇ ತೋಟದಲ್ಲಿ ಕೆಲಸ ಮಾಡಲು ಬಾಡಿಗೆಗೆ ತೆಗೆದುಕೊಂಡನೆ ಹೊರತು ಪಕ್ಕದ ತೋಟದಲ್ಲಿ ಕೆಲಸ ಮಾಡುವದಕ್ಕಾಗಿ ಅಲ್ಲ. ಪರಲೋಕ ರಾಜ್ಯವೆಂದರೆ ಸಭೆಯಾಗಿದೆ, ಮತ್ತು ಇದು ಇಂದು ಸಹ

ಇದೆ. ಅನೇಕ "ದಾಕ್ಷೇ ತೋಟಗಳು" ಕೆಲಸದ ಆಳುಗಳಿಗಾಗಿ ಇಂದು ಪ್ರತಿಸ್ಪರ್ಧೆ ಮಾಡುತ್ತಿವೆ, ಮತ್ತು ಅವರೆಲ್ಲರು ಒಂದೇ ಲೀತಿಯಾಗಿ ಇರುವದಿಲ್ಲ. ದೇವರ ದ್ರಾಕ್ಷೇತೋಟವನ್ನು ದೇವರ ವಾಕ್ಯದಲ್ಲಿ ಗುರುತಿಸಲ್ಪಡುತ್ತದೆ. ಆತನ ದ್ರಾಕ್ಷೇ ತೋಟದಲ್ಲಿ ಕೆಲಸ ಮಾಡಲು ಆಹ್ವಾನವನ್ನು ಸ್ವೀಕಲಿಸುವವರೆಲ್ಲಲಿಗೆ ಬಹುಮಾನ ಕೊಡಲ್ಪಡುತ್ತವೆ. ನಾವೆಲ್ಲರು ಆತನ ತೋಟದಲ್ಲಿ ಕೆಲಸ ಮಾಡುತ್ತಾ ಇದ್ದೇವೆ ಎನ್ನುವದು ಖಚಿತಪಡಿಸಿಕೊಳ್ಳಬೇಕು.

ಯಾರೊಬ್ಬರು ದೇವರೊಂದಿಗೆ ಚೌಕಾಶಿ ಮಾಡಬಾರದು. ನಾವು ಆತನ ವಾಕ್ಯದ ಮೇಲೆ ಭರವಸೆ ಇಡಬೇಕು ಮತ್ತು ಆತನು ಸಲಿಯಾದದ್ದನ್ನೇ ಮಾಡುವನು ಎಂದು ಆತನ ಗುಣ ನಡತೆ ಮೇಲೆ ವಿಶ್ವಾಸ ಇಡಬೇಕು (ಆದಿಕಾಂಡ 18:25). ಯೇಸು ಅವಲಿಗೆ, "ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವಲಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ" ಎಂದು ಹೇಳಿದನು (7:11; ನೋಡಿಲಿ ಲೂಕ 11:13). ರೋಮಾಪುರದವಲಿಗೆ 5:9-20ರಲ್ಲಿ ಮುಖ್ಯವಾದ ಭಾಗ "ಎಷ್ಟೋ ಹೆಚ್ಚಾಗಿ" ಎನ್ನುವಂಥದ್ದಾಗಿದೆ. ದೇವರು ನಮಗೆ ನಾವು ಆಸೆಪಟ್ಟದ್ದಕ್ಕಿಂತಲೂ ಎಷ್ಟೋ ಹೆಚ್ಚಾಗಿ ಕೊಡುವಂಥವನಾಗಿದ್ದಾನೆ. ಆತನು ನ್ಯಾಯವಂತನು, ಕೃಪೆಯುಳ್ಳವನು, ಮತ್ತು ಉದಾಲಿಯಾಗಿದ್ದಾನೆ; ನಮಗೆಲ್ಲಲಿಗೋಸ್ಕರ ಆತನು ಸಲಿಯಾದದ್ದನ್ನೇ ಮಾಡುತ್ತಾನೆ.

## ದ್ರಾಕ್ಷೇತೋಟದ ಸಾಮ್ಯದಿಂದ ಕಲಿಯುವದು (20:1-16)

19ನೇ ಅಧ್ಯಾಯದ ಕೊನೆಯ ವಚನವು ದ್ರಾಕ್ಷೇ ತೋಟದಲ್ಲಿ ಆಳುಗಳ ಸಾಮ್ಯವನ್ನು ಪಲಿಚಯಮಾಡುತ್ತದೆ. ನಾವು ಸಾಮ್ಯವನ್ನು ಸಲಿಯಾಗಿ ವಿವಲಿಸಬೇಕು ಮತ್ತು ಅಲ್ಲಿ ಕೊಟ್ಟಿರುವ ಕಾರಣಗಳನ್ನು ತಿಳಿಸಬೇಕು.

*ಕಥೆ ಹೇಳುವಂಥದ್ದು.* ಹೊಲದ ಯಜಮಾನನು ತನ್ನ ದ್ರಾಕ್ಷೇತೋಟದಲ್ಲಿ ಕೆಲಸ ಮಾಡಲು ಕೂಲಿ ಆಳುಗಳನ್ನು ಒಂದೇ ದಿವಸದಲ್ಲಿ ಬೇರೆ ಬೇರೆ ಸಮಯದಲ್ಲಿ ಮತ್ತು ಬೇರೆ ಬೇರೆ ಒಪ್ಪಂದದೊಂದಿಗೆ ಕರೆದುಕೊಂಡು ಬಂದಿದ್ದನು. ದಿನದ ಕೊನೆಯ ಗಳಿಗೆಯಲ್ಲಿ ಆತನು ಕೆಲಸಗಾರರ ಲೆಕ್ಕವನ್ನು ಮಾಡಿಕೊಟ್ಟು ಬಿಟ್ಟನು.

*ಕೆಲವು ಪಾಠಗಳನ್ನು ಗಮನಿಸಲಾಗಿದೆ.* ನಾವು ದೇವರೊಂದಿಗೆ ಚೌಕಾಶಿಗೆ ಇಳಿಯಬಾರದು. ಸ್ವೀಕಲಿಸುವ ಕರಾರುಗಳನ್ನು ಆತನು ಮಾತ್ರ ಸ್ಥಾಪಿಸಿದ್ದಾನೆ. ಹಾಗೋ, ನಾವು ದೇವರ ರಾಜ್ಯದಲ್ಲಿ ಕೆಲಸ ಮಾಡುವ ಇತರೆ ಕೆಲಸಗಾರರೊಂದಿಗೆ ಹೋಲಿಕೆ ಮಾಡಿಕೊಳ್ಳಬಾರದು. ಇತರರ ಬೆಳವಣಿಗೆಗೆ ನಾವು ಅಪಾದಿಸಬಾರದು ಅಥವಾ ಅವರ ಅಶೀರ್ವಾದಗಳಿಗೆ ಅಸೂಯೆಪಟ್ಟುಕೊಳ್ಳಬಾರದು.

ದೇವರು ನಿಷ್ಪಕ್ಷಪಾತನು ಮತ್ತು ಕರುಣೆಯುಳ್ಳವನು ಆಗಿದ್ದಾನೆ.

## ಕೆಲಸದ ಕಡೆಗೆ ಗುಣನಡತೆ (20:1-16)

ಈ ಸಾಮ್ಯವು ದೇವರ ರಾಜ್ಯದಲ್ಲಿರುವ ಸೇವಕರು ಮತ್ತು ಕೆಲಸಗಾರರ ಗುಣ ನಡತೆಯ ಕುಲಿತು ಎತ್ತಿ ತೋಲಿಸುತ್ತದೆ. ಯಾರು ಸಂಬಳಕ್ಕಾಗಿ ಕೆಲಸ ಮಾಡುವರೋ ಅವರು ಅಲ್ಪ ಸಂತೋಷವನ್ನು ಅಥವಾ ತೃಪ್ತಿಯನ್ನು ತಮ್ಮ ಕೆಲಸದಿಂದ ಪಡೆಯುವರು. ಅವರ ಉತ್ಪಾದನೆಗಾಗಲಿ ಅಥವಾ ಅವರ ಕೆಲಸದ ಗುಣಮಟ್ಟದ ಕುಲಿತು ಪ್ರಶ್ನೆ ಕೇಳದೆ ಇರುವದು ಕಷ್ಟಕರವಾಗಿದೆ.

ಗಡಿಯಾರವನ್ನು ನೋಡುವವರು ಕೇವಲ ಸಮಯವನ್ನು ಇಡುವದಕ್ಕೆ ಸಂಬಂಧಪಟ್ಟವ ರಾಗಿದ್ದಾರೆ ಮತ್ತು ಅಲ್ಲಿ ನಿರೀಕ್ಷಿಸದ್ದಕ್ಕಿಂತಲೂ ಹೆಚ್ಚಿನದಾಗಲಿ ಅಥವಾ ಅಗತ್ಯವಿರುವದನ್ನು ಮಾಡಲು ಮನಸ್ಸಿಲ್ಲದವರಾಗಿದ್ದಾರೆ. ಇನ್ನೂ ಇತರರು ಜನರನ್ನು ಗಮನಿಸುವವರಾಗಿದ್ದಾರೆ.

ಇತರರು ಏನು ಮಾಡುತ್ತಾರೆ ಎಂದು ಅವರು ಗಮನಿಸುತ್ತಾರೆ ಮತ್ತು ತಮ್ಮನ್ನು ಅವರ ಜೊತೆ ಕೆಲಸಗಾರರೊಂದಿಗೆ ಹೋಲಿಸಿಕೊಳ್ಳುತ್ತಾರೆ ಮತ್ತು ತಾವುಗಳು ಉತ್ತಮವಾದ ಕೆಲಸ ಮಾಡುವದನ್ನು ಬಿಟ್ಟುಬಿಡುತ್ತಾರೆ. ಇತರೆ ಕೆಲಸಗಾರರನ್ನು, ಉತ್ತಮವಾದ ರೀತಿಯಲ್ಲಿ ನೋಡಿ ಕೊಂಡರೆ, ಎಂಬುದಾಗಿ ಅವರು ಯೋಚಿಸಿದ್ದಿಯಾದರೆ, ಹೆಚ್ಚಿನ ಪರಿಹಾರ ಕೊಡಬೇಕು ಅಥವಾ ಉತ್ತಮ ಸ್ಥಾನಕೊಡಬೇಕು ಅಥವಾ ಕೆಲಸಮಾಡುವ ಸ್ಥಿತಿಗತಿಗಳು, ಅವರು ಅಸಮಾಧಾನಗೊಳ್ಳುವವರು ಆಗಿದ್ದಾರೆ.

ಅನೇಕ ಕೆಲಸಗಾರರು ತಮ್ಮ ಕೆಲಸವನ್ನು ಆನಂದಿಸುತ್ತಾರೆ ಮತ್ತು ಅದರಿಂದ ಉನ್ನತಮಟ್ಟದ ತೃಪ್ತಿಯನ್ನು ಹೊಂದಿಕೊಳ್ಳುವರು. ಅವರು ತಮ್ಮ ಉತ್ಪಾದನೆಗಾಗಿ ಅಥವಾ ಜಯಗಳಿಸಿದ್ದಕ್ಕಾಗಿ ಅವರು ಗರ್ವಪಡುತ್ತಾರೆ. ಕೆಲವು ಸಮಯಗಳು ಹೀಗೆ ಹೇಳುತ್ತಾರೆ, "ನಾನು ಯಾವುದೇ ಸಂಬಳಕೊಡದೆ ಇದ್ದರೂ ಇದನ್ನು ನಾನು ಮಾಡುತ್ತೇನೆ" ಎಂದು ಹೇಳು ವರು. ಕೆಲವರು ಅವರಿಗೆ ಕೇಳಿದ್ದಕ್ಕಿಂತಲೂ, ಅದಕ್ಕಿಂತಲೂ ಹೆಚ್ಚಿನ ಮಟ್ಟಕ್ಕೆ ಹೋಗುವರು. ಅವರಿಗೋಸ್ಕರ, ಕೆಲಸ ಒಂದು ಉದ್ಯೋಗವಲ್ಲ, ಆದರೆ ಅದು ಸೇವೆಯಾಗಿದೆ. ಅವರು ತಮ್ಮ ಜೊತೆ ಕೆಲಸಗಾರರ ಯಶಸ್ವಿಯನ್ನು ಹೊಗಳುತ್ತಾರೆ ಮತ್ತು ಅವರ ಸಾಧನೆಗಳಲ್ಲಿ ಅವರೊಂದಿಗೆ ಉಲ್ಲಾಸಪಡುವರು.

## ಶ್ರೇಷ್ಟತ್ವ ಅಥವಾ ಸೇವೆ? (20:20-28)

ಯಾಕೋಬ ಮತ್ತು ಯೋಹಾನನ ತಾಯಿ ಯೇಸುವಿನ ಮುಂದೆ ಸ್ವಾರ್ಥದ ಕೋರಿಕೆ ತೆಗೆದುಕೊಂಡು ಬಂದಳು. ಆತನ ರಾಜ್ಯದಲ್ಲಿ ತನ್ನ ಮಕ್ಕಳು ಒಬ್ಬನು ಆತನ ಬಲಗಡೆ ಮತ್ತು ಒಬ್ಬನು ಆತನ ಎಡಗಡೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಶಾಲೋಮೆ ಕೋರಿಕೊಂಡಳು. ಆ ಕೋರಿಕೆಯನ್ನು ಯೇಸು ತಡವಿಲ್ಲದೆ ಪೇತ್ರನಿಗೆ ಹೇಳುವದರ ಮುಖಾಂತರ ನೆರವೇರಿಸಿರಬಹುದು ಅವರು ಹನ್ನೆರಡು ಸಿಂಹಾಸನಗಳ ಮೇಲೆ ಕುಳಿತುಕೊಂಡು ಇಸ್ರಾಯೇಲಿನ ಹನ್ನೆರಡು ಕುಲಗಳಿಗೆ ನ್ಯಾಯ ತೀರಿಸುವರು ಎಂದು ಹೇಳಿ ದನು. ಈ ಪ್ರಶ್ನೆ ಯೇಸುವಿಗೆ ಕಲಿಸುವದಕ್ಕೆ ಅವಕಾಶ ನೀಡಿತು; ಆತನು ಸತ್ಯದ ಶ್ರೇಷ್ಟತೆ ಮತ್ತು ಸೇವಕನಾಗಿರುವದರ ಕುರಿತು ಬೋಧಿಸಿದನು.

*ತನ್ನ ಇಬ್ಬರ ಮಕ್ಕಳ ಕುರಿತು ತಾಯಿಯ ಹೆಮ್ಮೆ* (20:20-23). ಯಾಕೋಬ ಮತ್ತು ಯೋಹಾನನ ಹೆಮ್ಮೆಯ ತಾಯಿ, ಶಾಲೋಮೆ ದೇವರ ರಾಜ್ಯದಲ್ಲಿ ಸ್ಥಳ ಅವಕಾಶಕೊಡಲು ಕೇಳುತ್ತಿದ್ದಾಳೆ. ಆಕೆಯ ಪ್ರಶ್ನೆಗೆ ಯೇಸುವಿನ ಉತ್ತರ ಆಕೆ ಏನು ಕೇಳುತ್ತಿದ್ದಾಳೆ ಆಕೆಗೆ ಅರ್ಥ ಆಗುತ್ತಿಲ್ಲವೆಂದು ತೋರಿಸುತ್ತದೆ.

*ಹತ್ತು ಜನ ಕೋಪವುಳ್ಳ ಬೋಧಕರು* (20:24-28). ಆ ಉಳಿದ ಹತ್ತು ಜನ ಅಪೊಸ್ತಲರು ಯಾಕೆ ಕೋಪಗೊಂಡಿದ್ದರು? ತಮ್ಮ ಜೊತೆ ಅಪೊಸ್ತಲರು ಉನ್ನತ ಸ್ಥಾನದಲ್ಲಿರುವ ಆಲೋ ಚನೆ ಅವರು ಇಷ್ಟಪಡಲಿಲ್ಲ. ಬಹಳವಾಗಿ ಊದಿಕೊಂಡಿರುವ ಬೋಧಕರನ್ನು ಆತನು ಕೆಳಗಿನ ಸ್ಥಾನಕ್ಕೆ ತೆಗೆದುಕೊಂಡು ಬಂದನು. ಆತನು ಸೇವೆಯ ತತ್ವವನ್ನು ತನ್ನ ಸ್ವಂತ ಜೀವಿತದ ಉದಾಹರಣೆಯಿಂದ ವಿವರಿಸಿದನು: ಆತನು ಸೇವೆ ಮಾಡಲು ಬಂದನು ಮತ್ತು ಅಂತಿಮವಾಗಿ ಪಾಪಿಗಳಿಗೋಸ್ಕರ ಯಜ್ಞದ ಕುರಿಯಾಗಿ ಮರಣ ಹೊಂದಿದನು.

## ಹಿರಿಯರು ಮತ್ತು ಪ್ರಧಾನ ಸ್ಥಾನಗಳು (20:20-28)

ಯಾಕೋಬ ಮತ್ತು ಯೋಹಾನನ ತಾಯಿಗೆ ಯೇಸು ಸ್ಪಷ್ಟವಾಗಿ ಹೇಳಿದನು, ಮತ್ತು ಈ ಇಬ್ಬರು ಅಪೊಸ್ತಲರಿಗೂ ಹೇಳಿದನು, ಆತನ ರಾಜ್ಯದಲ್ಲಿ ಯಾವ ಪ್ರಧಾನ ಸ್ಥಾನಗಳು ಇರುವದಿಲ್ಲವೆಂದು ಹೇಳಿದನು (ಮಾರ್ಕ 10:38-40). ಈ ರೀತಿಯಾಗಿ ಲೋಕದ ರಾಜ್ಯಗಳು ನಡೆಯುತ್ತಿರುತ್ತವೆ, ಒಬ್ಬ ವ್ಯಕ್ತಿಯೊಂದಿಗೆ, "ಇದರ ಒಡೆಯನಾಗಿದ್ದು" ಇತರರಗಳನ್ನು

ಆಳುತ್ತಾನೆ. ಹಿರಿಯರು ಸಭೆಯಲ್ಲಿ "ಆಳುವರು" (1 ತಿಮೊಥೆ 5:17; ಇಬ್ರಿಯ 13:7, 17). ಆದರೆ ಅವರು "ಅದರ ಮೇಲೆ ಅಧಿಕಾರ ತೋರಿಸುವವರಂತೆ" ಮಾಡುವವರಾಗಿರಬಾರದು (1 ಪೇತ್ರ 5:3). ಯಾವ ರೀತಿಯಾಗಿ ಅವರು ಆಳಬೇಕು? "ಆಳು" ಎಂದರೆ ಅರ್ಥ "ಮುನ್ನಡೆಸು, ಸಲಹೆ, ಅಥವಾ ಮಾರ್ಗದರ್ಶನ" ಎಂದಾಗುತ್ತದೆ. ನಂಬಿಕೆಯ ವಿಷಯದಲ್ಲಿ, ಹಿರಿಯರಿಗೆ ಯಾವುದೇ ಕಾನೂನಾತ್ಮಕವಾದ ಅಧಿಕಾರವಿಲ್ಲ. ದೇವರೊಬ್ಬನೆ ನಿಯಮವನ್ನು ಕೊಡುವಾತನು (ಯಾಕೋಬ 4:12). ಒಂದು ಸಭೆಯ ಹಿರಿಯನು ಕೆಟ್ಟತನದಿಂದ ಸತ್ಯವನ್ನು ನಿರ್ಧರಿಸಲು ಸಾಕಷ್ಟು ಜ್ಞಾನ ಹೊಂದಿದವನಾಗಿರಬೇಕು ಮತ್ತು ಆತನು ಸೇವೆ ಮಾಡುವಲ್ಲಿ ಇರುವ ದೈವ ಭಕ್ತರಿಗೆ, ಮಾರ್ಗದರ್ಶನ ನೀಡುವವನಾಗಿರಬೇಕು. ಸಮಯೋಚಿತವಾದ ಸನ್ನಿವೇಶಗಳಲ್ಲಿ ಅಥವಾ ತೀರ್ಮಾನ ಕೊಡುವಾಗ, ಆತನು ದೇವರ ವಾಕ್ಯದ ತತ್ವವನ್ನು ಉಪಯೋಗಿಸಿ ನಿರ್ಧಾರ ತೆಗೆದುಕೊಳ್ಳಲು ಸಮರ್ಥನಾಗಿರಬೇಕು.

## ಸೇವಕನ ನಾಯಕತ್ವ (20:20-28)

ಅನ್ಯರ ಶೈಲಿಯ ನಾಯಕತ್ವವನ್ನು ಯೇಸು ಖಂಡಿಸಿದ್ದಾನೆ, ಅವರು ತಮ್ಮ ಸ್ವಾರ್ಥಕ್ಕಾಗಿ ಇತರರ ಮೇಲೆ ಅಧಿಕಾರವನ್ನು ಚಲಾಯಿಸುತ್ತಾರೆ. ಅದಕ್ಕೆ ತನ್ನ ಶಿಷ್ಯರನ್ನು ಸೇವೆಯ ದಾರಿಯನ್ನು ಹಿಂಬಾಲಿಸಲು ಆತನು ಕರೆದನು. ಅನೇಕರು ಇಂದು ಯಶಸ್ವಿ ಏಣಿಯನ್ನು ಹತ್ತುವದನ್ನು ನೋಡುತ್ತಾರೆ, ಅವರು ಉನ್ನತವಾದ ಹೆಸರನ್ನು, ದೊಡ್ಡದಾದ ಸಂಬಳವನ್ನು, ಅಧಿಕಾರವನ್ನು ಹೆಚ್ಚಿಸಿಕೊಳ್ಳುವರು, ಮತ್ತು ಹೆಚ್ಚಾಗಿ ಗುರುತಿಸಲ್ಪಡುವದನ್ನು ಅವರು ನೋಡುತ್ತಿರುತ್ತಾರೆ. ಅವರ ಎಲ್ಲಾ ಕಾರ್ಯಗಳು ತಮಗಾಗಿಯೇ ಇರುತ್ತವೆ. ಅದರ ಬದಲಾಗಿ, ನಾವು ಇತರರಿಗೆ ಸಹಾಯ ಮಾಡುವವರಾಗಬೇಕೆಂದು ಯೇಸು ಬಯಸುತ್ತಾನೆ. ನಮ್ಮ ಜೀವನದಲ್ಲಿ ಇತರರಿಗೆ ಆಶೀರ್ವಾದಕರವಾಗಿ ಇರುವದರಿಂದ ಸತ್ಯವನ್ನು ಕಂಡುಕೊಳ್ಳುತ್ತೇವೆ ಮತ್ತು ಅವರನ್ನು ಕ್ರಿಸ್ತನೆಡೆಗೆ ನಡೆಸಬೇಕು. ನಿಜವಾಗಿಯೂ ಜೀವಿತ ನಮಗಾಗಿ ಅಲ್ಲ, ಆದರೆ ಈ ಲೋಕದಲ್ಲಿ ನಾವು ವ್ಯತ್ಯಾಸವನ್ನು ಮಾಡಬಹುದು. David Stewart

---

ಟಿಪ್ಪಣಿಗಳು

[1]Talmud *Baba Metzia* 83b. [2]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 499, n. 5. [3]ರೋಮನ್ ಹಣವು denariusಗೆ ಸಮವಾಗಿದೆ. ಕಲ್ಪಿತ ಗ್ರಂಥಗಳಲ್ಲಿ Greek drachmaದಷ್ಟು ಹಣವು ಒಂದು ದಿನದ ಕೂಲಿಗಾಗಿ ಕೊಡುತ್ತಿದರು, ಆತನ ಖರ್ಚನ್ನು ಸೇರಿಸಿಕೊಡುತ್ತಿದ್ದರು. (Tobit 5:14, 15.) [4]Tacitus *Annals* 1.17; Pliny *Natural History* 33.13. [5]Michael J. Wilkins, "Matthew," in *Zondervan Illustrated Bible Backgrounds Commentary, vol. 1, Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 121. [6]Morris, 500. [7]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 739. [8]Robert H. Gundry, *Matthew: A Commentary on His Literary and Theological Art* (Grand Rapids, Mich.: Wm. B. Eerdmans Publishing Co., 1982), 398. [9]David Hill, *The Gospel of Matthew,* The New Century Bible Commentary (Grand Rapids, Mich.: Wm. B. Eerdmans Publishing Co., 1972), 286. [10]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick W. Danker (Chicago: University of Chicago Press, 2000), 398.

[11]Craig S. Keener, *A Commentary on the Gospel of Matthew* (Grand Rapids, Mich.: Wm. B. Eerdmans Publishing Co., 1999), 483, n. 72. ನೋಡಿರಿ Demosthenes *On the*

*Crown* 51; Dionysius of Halicarnassus 6.81.3. [12]ಅಸಮಾಧಾನದ ಗುಣ ನಡತೆ ಫರಿಸಾಯರೆಂದು ಮುಂಗುರುತು ತೋರಿಸುತ್ತಿತ್ತು, ಸುಂಕವಸೂಲಿಗಾರರು ಮತ್ತು ಪಾಪಿಗಳು ಪಶ್ಚಾತ್ತಾಪ ಪಡುವದನ್ನು ನೋಡಿ ಗೊಣಗುಟ್ಟಿದರು (ಲೂಕ 15:1, 2). ಅದರ ಪರಿಣಾಮದಿಂದ, ಯೇಸು ತಪ್ಪಿಹೋದ ಮಗನ ಸಾಮ್ಯವನ್ನು ಹೇಳಿದನು, ದೊಡ್ಡ ಸಹೋದರನ ಹೊಟ್ಟೆಕಿಚ್ಚು ತೋರಿಸುತ್ತಿದ್ದಾನೆ. ತರುವಾಯ, ಸಭೆ ಸ್ಥಾಪನೆಯಾದ ನಂತರ, ಯೆಹೂದ್ಯ ಕ್ರೈಸ್ತರು ತಮ್ಮ ಗುಣ ನಡತೆಯೊಂದಿಗೆ ಅನ್ಯರು ಕ್ರೈಸ್ತರಾಗಿದ್ದವರೊಂದಿಗೆ ಪ್ರಯಾಸಪಡಬೇಕಾಯಿತು (ಅಪೊಸ್ತಲ ಕೃತ್ಯಗಳು 15; ಗಲಾತ್ಯ 2). [13]Donald A. Hagner, *Matthew 14-28,* Word Biblical Commentary, vol. 33B (Dallas: Word Books, 1995), 573. [14]ಕರ್ತನು ತನ್ನ ಶ್ರಮೆಯ ಕುರಿತು ತನಗೆ ಹತ್ತಿರವಾದವರೊಂದಿಗೆ ಮಾತಾಡಿದನು (ಪೇತ್ರ, ಯಾಕೋಬ, ಮತ್ತು ಯೋಹಾನ) ಅವರು ಪರ್ವತದ ಮೇಲೆ ರೂಪಾಂತರ ಹೊಂದಿದ ಸಮತಾನದವರಂತೆ ಇದ್ದರು (17:9-13). [15]Mishnah *Sanhedrin* 7.1. [16]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 189. [17]ಈ ಸಂಬಂಧವು ಸ್ವಲ್ಪ ಮಟ್ಟಿಗೆ ವಿವರಿಸಿದೆ ಆ ವಿಷಯವೆನೆಂದರೆ ಯೇಸು ತನ್ನ ತಾಯಿಯಾದ ಮರಿಯಳನ್ನು ಆಕೆಯ ಸಹೋದರನ ಮಗ ಅಪೊಸ್ತಲನಾದ ಯೋಹಾನನಿಗೆ ಯಾಕೆ ಒಪ್ಪಿಸಿಕೊಟ್ಟನು (19:26, 27). [18]Wilkins, 123. [19]Josephus *Antiquities* 6.11.9; ನೋಡಿರಿ 1 ಸಮುವೇಲ 20:25. [20]J. W. McGarvey, *The New Testament Commentary,* vol. 1, *Matthew and Mark* (N.p., 1875; reprint, Delight, Ark.: Gospel Light Publishing Co., n.d.), 176.

[21]Bruce M. Metzger, *A Textual Commentary on the Greek New Testament,* 2d ed. (Stuttgart: German Bible Society, 1994), 42; see KJV; NKJV. [22]Pliny *Natural History* 4.12.69-70; Tacitus *Annals* 3.68; 4.30; 15.71. [23]Irenaeus *Against Heresies* 2.22.5; 3.1.1; 3.3.4; Clement of Alexandria *Who Is a Rich Man* 42; Eusebius *Ecclesiastical History* 3.13, 18, 23, 31; 4.14; 5.8, 24. [24]Keener, 486-87. [25]ಯೇಸು ಈಗ ತಾನೆ ಆತನ ಪ್ರವಾದಿಸಿದನು ಅದೇನೆಂದರೆ ಅನ್ಯರು ಆತನನ್ನು ಅಪಹಾಸ್ಯಮಾಡುವರು, ಚಡಿ ಏಟುಕೊಡುವರು, ಮತ್ತು ಆತನನ್ನು ಶಿಲುಬೆಗೆ ಹಾಕುವರು ಎಂದು ಹೇಳಿದನು (20:19). ಆತನು ಅವರ ಅನ್ಯಾಯಕ್ಕಾಗಿ ಬಲಿಪಶುವಾದನು. [26]Wilkins, 124. [27]Ibid. [28]F. Buchsel, in *Theological Dictionary of the New Testament,* ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1967), 4:344. [29]Jack P. Lewis, *The Gospel According to Matthew,* Part 2, The Living Word Commentary (Austin, Tex.: Sweet Publishing Co., 1976), 81. [30]W. F. Albright and C. S. Mann, *Matthew,* The Anchor Bible (Garden City, N.Y.: Doubleday & Co., 1971), 242.

[31]Wilkins, 125. [32]Josephus ರವರು ಬರೆದದ್ದು, "ಎಲ್ಲಾ ಕಡೆ ಸುತ್ತುವ ಗಾಳಿ ಇಲ್ಲದೆ ಉತ್ತಮವಾದ ವಾತಾವರಣ ಸಹ ಇಲ್ಲದೆ, ದೇಶದ ಜನರು ಕೇವಲ ನಾರುಬಟ್ಟೆಗಳನ್ನು ಧರಿಸಿಕೊಳ್ಳುತ್ತಿದ್ದರು, ಆಗ ಮಂಜು ಸಂಪೂರ್ಣ ಯೂದಾಯವನ್ನು ಆವರಿಸಿಕೊಳ್ಳುತ್ತಿತ್ತು" (Josephus *Wars* 4.8.3). [33]Ibid., 1.18.5. [34]Hendriksen, 752.